# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಭಾನುವಾರ, ನವೆಂಬರ್ 15, 2020

ಸಂಪುಟ : 47 ಸಂಚಿಕೆ : 196 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 8 ರೂ : 4.00 www.janathavani.com janathavani@mac.com





# ರಾಶಿ ಭವಿಷ್ಯ

**ದಿನಾಂಕ : 15.11.2020 ರಿಂದ 21.11.2020**

**– ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ)**
**(ಚೂ.ಚೇ.ಚೋ.ಲ.ಲಿ.ಉ.ಲೇ.ಲೊ.ಅ.)**

ಅನವಶ್ಯಕವಾಗಿ ಮತ್ತೊಬ್ಬರೊಂದಿಗೆ ವಾದ-ವಿವಾದ ಬೇಡ. ಯಾರದೋ ಒತ್ತಾಯಕ್ಕೆ ನಿಮ್ಮ ನಿರ್ಧಾರ ಬದಲಿಸಬೇಡಿ. ದೊಡ್ಡ ಯೋಜನೆಗಳಾರಂಭ ಸದ್ಯಕ್ಕೆ ಬೇಡ. ಸಮಾಧಾನ ವರ್ತನೆಯಿಂದ ಮಾತ್ರ ಕುಟುಂಬದಲ್ಲಿ ಸೌಹಾರ್ದತೆ ಮೂಡಲು ಸಾಧ್ಯ. ವ್ಯವಹಾರಗಳಿಗೆ ಸ್ನೇಹಿತರ ನೆರವು, ಆದಾಯದ ಮೂಲದಲ್ಲಿ ಕೊರತೆ, ಹಾಗೆಂದ ಮಾತ್ರಕ್ಕೆ ಚಿಂತೆ ಬೇಡ. ಆರೋಗ್ಯದ ವಿಷಯದಲ್ಲಿ ಉದಾಸೀನತೆ ಸಲ್ಲದು. ವಿದ್ಯಾರ್ಥಿಗಳಿಗೆ ಉತ್ತಮ ದಿನಗಳು. ಭಾನು, ಸೋಮ, ಮಂಗಳ ಶುಭ ದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2)**
**(ಇ.ಉ.ಎ.ಒ.ವ.ವಿ.ವು.ವೆ.ವೋ)**

ಕೌಟುಂಬಿಕ ವಿಚಾರಗಳನ್ನು ಅಪರಿಚಿತರ ಮುಂದೆ ಚರ್ಚಿಸಬೇಡಿ. ಮನೆಯಲ್ಲಿ ಹಿರಿಯರೊಂದಿಗೆ ವಾದ-ವಿವಾದಗಳನ್ನು ಮಾಡುವುದಕ್ಕಿಂತ ಮೌನವೇ ಲೇಸು. ನವದಂಪತಿಗಳು ತಾಳ್ಮೆಯಿಂದ ವರ್ತಿಸಿದಲ್ಲಿ ಮಾತ್ರ ಬಾಳು ಬಂಗಾರವಾದೀತು. ಲೇವಾದೇವಿ ವ್ಯವಹಾರದಲ್ಲಿ ಸಾಲ ತೆಗೆದು ಕಂಡವರು ನಿಮಗೆ ಲೆಕ್ಕ ತಪ್ಪಿಸಬಹುದು. ಕೈಗಾರಿಕೋದ್ಯಮಿಗಳು ಕಾಲಕ್ಕೆ ತಕ್ಕಂತೆ, ತಮ್ಮ ತಂತ್ರಗಾರಿಕೆ ಬದಲಾಯಿಸಿಕೊಳ್ಳುವುದು ಉತ್ತಮ. ಮಹಿಳಾ ರಾಜಕಾರಣಿಗಳಿಗೆ ತಮ್ಮ ಹಿಂಬಾಲಕರಿಂದಲೇ ಉನ್ನತ ಹುದ್ದೆ ಅಥವಾ ಭಾಗ್ಯ ಕೂಡಿ ಬರಲಿದೆ. ಕುಲ ದೇವತಾ ದರ್ಶನಭಾಗ್ಯ ನಿಮ್ಮದಾಗಲಿದೆ. ಬುಧ, ಗುರು, ಶುಕ್ರ, ಶುಭ ದಿನಗಳು.

**ಮಿಥುನ (3,4, ಆರಿದ್ರಾ, ಪುನರ್ವಸು 1,2,3)**
**(ಕ.ಕಿ.ಕು.ಘ, ಙ, ಛ.ಕೆ.ಕೋ.ಹ.)**

ಸರ್ಕಾರದಿಂದ ಸಿಗಬೇಕಾಗಿದ್ದ ನೆರವು ದೊರೆತರೂ ಕೂಡ ನಿಮ್ಮ ಬೇಜವಾಬ್ದಾರಿತನ ಅಥವಾ ಉದಾಸೀನ ಪ್ರವೃತ್ತಿಯಿಂದಾಗಿ ಅದು ಬೇರೆಯವರ ಪಾಲಾಗಬಹುದು. ಅಶಿಸ್ತು ಭಾರೀ ನಷ್ಟವನ್ನುಂಟು ಮಾಡೀತು. ಸೋದರರನು ತನ್ನ ಮಡದಿಗೋಸ್ಕರ ಆಸ್ತಿ ಖರೀದಿಸಬಹುದು. ಖಾಸಗೀ ಕಂಪನಿ ನೌಕರರಿಗೆ ಉದ್ಯೋಗದಲ್ಲಿದ್ದ ಅಸ್ಥಿರತೆ ದೂರವಾಗಲಿದೆ. ವ್ಯವಹಾರದಲ್ಲಿ ಉತ್ತಮ ಬೆಳವಣಿಗೆ ಕಂಡು ಬಂದರೂ ಲಾಭಾಂಶ ಕಡಿಮೆ. ಆರೋಗ್ಯದ ವಿಚಾರದಲ್ಲಿ ಉದಾಸೀನ ಸಲ್ಲದು. ಮಗಳಿಗೆ ವಿವಾಹ ಭಾಗ್ಯ ಕೂಡಿಬರಲಿದೆ. ಸಂಶೋಧಕರಿಗೆ ಪ್ರಶಂಸೆ ಮಾತುಗಳು ಎಲ್ಲಡೆ ಕೇಳಿ ಬರಲಿವೆ. ಭಾನು, ಬುಧ, ಗುರು ಶುಭ ದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ)**
**(ಹಿ.ಹು.ಹೆ.ಹೊ.ಡ.ಡಿ.ಡು.ಡೆ.ಡೋ)**

ಅನಾವಶ್ಯಕವಾಗಿ ಮುಂದೂಡಿದ್ದ ಕಾರ್ಯಗಳನ್ನು ಆದಷ್ಟು ಬೇಗ ಮಾಡಲು ಪ್ರಯತ್ನಿಸಿ. ಇಲ್ಲವಾದಲ್ಲಿ ಅದೇ ಮುಂದೆ ನಿಮಗೆ ದೊಡ್ಡ ತಲೆನೋವಾಗಿ ಪರಿಣಮಿಸಬಹುದು. ರಾಜಕಾರಣಿಗಳ ಸಹಾಯದಿಂದ ವ್ಯವಹಾರದ ಒಪ್ಪಂದಗಳು ಸರಿದಾರಿಗೆ ಬರುವವು. ಕಾರ್ಮಿಕ ವರ್ಗದವರಿಗೆ ಹೆಚ್ಚಿನ ವೇತನ ಶ್ರಮಕ್ಕೆ ತಕ್ಕಂತೆ ಸಿಗಲಿದೆ. ಅಪರಿಚಿತರೊಂದಿಗೆ ಹಣಕಾಸಿನ ವ್ಯವಹಾರ ಖಂಡಿತಾ ಬೇಡವೇ ಬೇಡ. ಹಿರಿಯರ ಆಸ್ತಿ ಪಾಲುದಾರಿಕೆ ವಿಚಾರ ಮುನ್ನೆಲೆಗೆ ಬರಲಿದೆ. ವಿದ್ಯಾರ್ಥಿಗಳಿಗೆ ಉತ್ತಮ ದಿನಗಳು. ಭಾನು, ಸೋಮ, ಗುರು ಶುಭ ದಿನಗಳು.

**ಸಿಂಹ ( ಮಘ, ಪುಬ್ಬ, ಉತ್ತರ 1)**
**(ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**

ಹಣಕಾಸಿನ ಸಮಸ್ಯೆ ಸುಧಾರಿಸಿದಂತೆ ಮುಗ್ಗಟ್ಟು ತಪ್ಪಿದ್ದಲ್ಲ. ನೀವು ಎಷ್ಟೇ ಪ್ರಾಮಾಣಿಕರಾಗಿದ್ದರೂ, ಸಹೋದ್ಯೋಗಿಗಳು ನಿಮ್ಮ ವಿರುದ್ಧ ಪಿತೂರಿಯನ್ನು ಮಾಡುವುದನ್ನು ಬಿಡುವುದಿಲ್ಲ. ಬೆನ್ನುನೋವು ಅಥವಾ ಮೂಳೆ ಸಂಧಿ ವ್ಯಾಧಿ ನಿಮ್ಮನ್ನು ಬಾಧಿಸಬಹುದು. ವಿದ್ಯಾರ್ಥಿಗಳು ತಮ್ಮ ಚತುರತೆಯಿಂದ ಎಲ್ಲರ ಗಮನ ಸೆಳೆಯುವರು. ಕ್ರೀಡಾಪಟುಗಳಿಗೆ ಉತ್ತಮ ಅವಕಾಶಗಳು. ವಿದೇಶದಲ್ಲಿರುವ ಮಗನಿಂದ ಆರ್ಥಿಕ ನೆರವು. ಹಿರಿಯರ ಆಣತಿಯಂತೆ ನಡೆಯಿರಿ. ದುರ್ಗಾದೇವಿಯನ್ನು ಆರಾಧಿಸಿ. ಭಾನು, ಮಂಗಳ, ಗುರು ಶುಭ ದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2)**
**(ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**

ಹದಗೆಟ್ಟಿದ್ದ ಆರ್ಥಿಕ ಪರಿಸ್ಥಿತಿಯು ಸುಧಾರಿಸಲಿದೆ. ಹೊಸ ವ್ಯಾಪಾರವನ್ನು ಆರಂಭಿಸುವ ಮೊದಲು ಹಣಕಾಸಿನ ವ್ಯವಸ್ಥೆ ಸರಿಯಾಗಿರಲಿ. ಮತ್ತೊಬ್ಬರ ಆಂತರಿಕ ವಿಚಾರದಲ್ಲಿ ನಿಮ್ಮ ಪ್ರವೇಶದಿಂದ ಅಪಮಾನ ತಪ್ಪಿದ್ದಲ್ಲ. ವಿದ್ಯಾರ್ಥಿಗಳು ಉತ್ತಮ ಅವಕಾಶನ್ನು ಕಳೆದುಕೊಳ್ಳುವಿರಿ. ಸ್ವಂತ ಉದ್ಯಮದಲ್ಲಿ ಸಾಕಷ್ಟು ಲಾಭ. ಅತಿಯಾದ ಭೋಜನ ಕೂಟ ಆರೋಗ್ಯದ ಮೇಲೆ ಅಡ್ಡ ಪರಿಣಾಮ ಬೀರಬಹುದು. ರೈತಾಪಿ ಮಿತ್ರರಿಗೆ ಸರ್ಕಾರದಿಂದ ಸಾಕಷ್ಟು ನೆರವು ದೊರೆಯಲಿದೆ. ಮತ್ತೊಬ್ಬರಿಗೆ ಜಾಮೀನಾಗುವುದರಿಂದ ಅಪಾಯ ಮೈಮೇಲೆ ಎಳೆದು ಕೊಂಡಂತಾಗುತ್ತದೆ ಎಂಬುದು ನೆನಪಿರಲಿ. ಸೋಮ, ಬುಧ, ಗುರು ಶುಭ ದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3)**
**(ರ.ರಿ.ರು.ರೆ.ರೊ.ತ.ತಿ.ತು.ತೆ.)**

ಅಭಿವೃದ್ಧಿಗೆ ತಕ್ಕಂತೆ ಅಧಿಕ ಶ್ರಮ ಅನಿವಾರ್ಯವಾಗಬಹುದು. ಹಾಗೆಂದ ಮಾತ್ರಕ್ಕೆ ಒತ್ತಡಕ್ಕೆ ಹೆದರಬೇಡಿ. ಪ್ರಸಂಗ ಬಂದಲ್ಲಿ, ಹಿರಿಯರ ಅಥವಾ ಸ್ನೇಹಿತರ ನೆರವು ಪಡೆಯಿರಿ. ಕೆಲವೊಮ್ಮೆ ನಿಮ್ಮ ಅಹಂಕಾರದ ಮಾತುಗಳೇ ನಿಮಗೆ ಮಾರಕವಾದಾವು. ನೆರೆಹೊರೆಯವರೊಂದಿಗೆ ಸೌಹಾರ್ದತೆಯಿಂದಿರುವುದು ಉತ್ತಮ. ಕಷ್ಟಪಟ್ಟು ಸಂಪಾದಿಸಿದ ಹಣ ಅಪವ್ಯಯವಾಗದಂತೆ ನೋಡಿ ಕೊಳ್ಳಿ. ಸಮಾಜ ಸೇವೆಯಲ್ಲಿರುವವರಿಗೆ ನಿಂದಾಸ್ತುತಿಗಳೆರಡೂ ಅನಿವಾರ್ಯ. ಮಡದಿಯ ಆರೋಗ್ಯದ ವಿಷಯದಲ್ಲಿ ಉದಾಸೀನ ಬೇಡ. ವಿಜ್ಞಾನಿಗಳಿಗೆ ಸಮಾಜದಲ್ಲಿ ಪ್ರಶಂಸೆ ಹಾಗೂ ಸನ್ಮಾನಗಳಾಗಿವೆ. ಗುರು, ಶುಕ್ರ, ಶನಿ ಶುಭ ದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ)**
**(ತೊ.ನ.ನಿ.ನು.ನೆ.ನೋ.ಯ.ಯು.)**

ಎಲ್ಲರನ್ನೂ ಮಾತಿನಿಂದ ಆಕರ್ಷಿಸುವ ಶಕ್ತಿ ನಿಮಗಿದ್ದರೂ ಅದರಿಂದ ಬೇರೆಯವರಿಗೆ ಮನರಂಜನೆಯೇ ಹೊರತು, ಪ್ರಯೋಜನವಿಲ್ಲ. ಶಕ್ತಿಮೀರಿ ದುಡಿಯುವ ನಿಮಗೆ ಹಣದ ಕೊರತೆ ಕಾಣದಿದ್ದರೂ ಉಳಿತಾಯ ಮಾತ್ರ ಶೂನ್ಯ. ಹಳೆಯ ಕೌಟುಂಬಿಕ ವಿಷಯಗಳು ನಿಮ್ಮ ಮಾನಸಿಕ ನೆಮ್ಮದಿ ಹಾಳು ಮಾಡಬಹುದು. ಪಾಲುದಾರಿಕೆ ವ್ಯವಹಾರದಲ್ಲಿ ಭಾರೀ ವಂಚನೆ, ಹಳೆಯ ರೋಗಗಳು ಮತ್ತೆ ಮರುಕಳಿಸಬಹುದು. ಹೊಸ ಯೋಜನೆಗಳ ಆರಂಭ ಸದ್ಯಕ್ಕೆ ಬೇಡ. ಸಾಲ ಗಳ ತೀರಾವಳಿಗೊಂದು ವ್ಯವಸ್ಥೆ ಮಾಡುವುದು ಒಳಿತು. ವಿದ್ಯಾರ್ಥಿ ಗಳಿಗೆ ಉತ್ತಮ, ಬಡವರಿಗೆ ಅನ್ನದಾನ ಮಾಡಿ. ಭಾನು, ಮಂಗಳ, ಬುಧ ಶುಭ ದಿನಗಳು.

**ಧನಸ್ಸು (ಮೂಲ, ಪೂರ್ವಾಷಾಢ, ಉತ್ತರಾಷಾಢ)**
**(ಯೆ.ಯೋ. ಬ.ಬಿ.ಬು.ಧ.ಫ.ಡ.ಬೆ.)**

ಆತ್ಮಗೌರವವನ್ನು ಹೆಚ್ಚಿಸಿಕೊಳ್ಳುವುದು ಉತ್ತಮವೇ ಆದರೂ. ಅದು ಅಹಂಕಾರಕ್ಕೆ ಕಾರಣವಾಗಬಾರದಷ್ಟೇ. ಆದಾಯ ಮತ್ತು ಖರ್ಚು ಸಮಸಮವಾಗುವುದರಿಂದ ಉಳಿತಾಯವಾಗದೇ ಹೋಗಬಹುದು. ಶತ್ರುಗಳು ಅತ್ಯಂತ ಬಲಿಷ್ಟರಾಗಿರುವುದರಿಂದ ಅವರನ್ನು ಉಪಾಯದಿಂದಲೇ ಮಣಿಸಬೇಕು. ನೌಕರರಿಗೆ ಶ್ರಮಕ್ಕೆ ತಕ್ಕ ವೇತನ ದೊರೆಯದೇ ಹೋಗಬಹುದು. ಕಟ್ಟಡ ಸಾಮಗ್ರಿಗಳ ಮಾರಾಟ ಜೋರಾಗಿ ನಡೆಯಲಿದೆ. ಕೃಷಿಕ ಮಿತ್ರರಿಗೆ ಆದಾಯ ಹೆಚ್ಚಲಿದೆ. ಲೆಕ್ಕಪರಿಶೋಧಕರಿಗೆ ಬಿಡುವಿಲ್ಲದ ಕೆಲಸ. ಆರೋಗ್ಯದ ವಿಷಯದಲ್ಲಿ ಉದಾಸೀನ ಬೇಡ. ಸೋಮ, ಬುಧ, ಗುರು ಶುಭ ದಿನಗಳು.

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2)**
**(ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**

ಬಿಡುವಿಲ್ಲದ ಕೆಲಸಗಳಿಂದ ತುಸು ಬಿಡುವು ಸಿಗಲಿದೆ. ಅನಿರೀಕ್ಷಿತವಾಗಿ ಅನೇಕ ಖರ್ಚುಗಳು, ಮಕ್ಕಳು ಇಷ್ಟಪಟ್ಟಲ್ಲಿ ಮಾತ್ರ ವ್ಯವಹಾರದಲ್ಲಿ ತೊಡಗಿಸಿಕೊಳ್ಳಿ. ಸಹೋದ್ಯೋಗಿಗಳಿಗೆ ಶಕ್ತಿಮೀರಿ ಸಹಾಯ ಮಾಡುವಿರಿ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ವಿಶೇಷ ಆಸಕ್ತಿ, ಸರ್ಕಾರಿ ಉನ್ನತಾಧಿಕಾರಿಗಳಿಗೆ ಮುಂಬಡ್ತಿಯೊಂದಿಗೆ, ವರ್ಗಾವಣೆ, ಆಶಾದಾಯಕವಾದ ನಿಮ್ಮ ಹೊಸ ಯೋಜನೆ ಗಳಿಗೆ ಉತ್ತಮ ಸಹಾಯ, ಸಹಕಾರ ದೊರೆಯಲಿದೆ. ಆದಾಯದ ಮೂಲದಲ್ಲಿ ತುಸು ಹೆಚ್ಚಳ ಕಾಣಲಿದೆ. ಬಂಧುಗಳೊಂದಿಗೆ ಅನಾವಶ್ಯಕ ವಾಗ್ವಾದ ಬೇಡವೇ ಬೇಡ. ಹಿರಿಯರ ಆಣತಿಯಂತೆ ನಡೆದುಕೊಳ್ಳಿ. ಕುಲದೇವಾತಾರಾಧನೆ ಮಾಡಿರಿ.

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3)**
**(ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**

ಹದಗೆಟ್ಟಿದ್ದ ಕುಟುಂಬದ ಸಾಮರಸ್ಯವನ್ನು ಸರಿದಾರಿಗೆ ತರಲು ಹರಸಾಹಸ ಪಡುವಿರಿ. ಆಸ್ತಿಗೆ ಸಂಬಂಧಿಸಿದ ದಾಖಲೆಗಳನ್ನು ಆದಷ್ಟು ಬೇಗ ಸರಿಪಡಿಸಿಕೊಳ್ಳಿ. ಉದ್ಯೋಗದಲ್ಲಿ ಬದಲಾವಣೆ ಸದ್ಯಕ್ಕೆ ಬೇಡ. ಸಾಲಗಳ ತೀರಾವಳಿಗೆ ಸಮಯ ಕೂಡಿ ಬರಲಿದೆ. ಚಿಕ್ಕ ಮಕ್ಕಳ ಆರೋಗ್ಯದಲ್ಲಿ ತುಸು ವ್ಯತ್ಯಾಸವಾಗಲಿದೆ. ಅವಿವಾಹಿತರಿಗೆ ಸಂಬಂಧಿಗಳಲ್ಲಿ ಸಂಗಾತಿ ಸಿಗುವ ಸಂಭವವಿದೆ. ವಿದ್ಯಾರ್ಥಿಗಳಿಗೆ ವಿದೇಶದಲ್ಲಿ ಅಧ್ಯಯನ ಮಾಡಲು ಹಣಕಾಸಿನ ನೆರವು, ಬಡವರಿಗೆ ಅನ್ನದಾನ ಮಾಡಿರಿ. ಬುಧ, ಶುಕ್ರ, ಶನಿವಾರ ಶುಭ ದಿನಗಳು.

**ಮೀನ (ಪೂರ್ವಾಭಾದ್ರ, 4, ಉತ್ತರಾಭಾದ್ರ, ರೇವತಿ)**
**(ದಿ.ದು.ಖ.ಝ.ಥ.ದೆ.ದೋ.ಖ.ಚ.ಚಿ.)**

ನಿಮ್ಮ ಅತಿಯಾದ ಸಂಕೋಚ ಸ್ವಭಾವದಿಂದಾಗಿ ಬಂಧುಗಳ ಮಧ್ಯೆ ಉದಾಸೀನಕ್ಕೆ ಒಳಗಾಗುವಿರಿ. ವ್ಯವಹಾರದಲ್ಲಿ ಕಟ್ಟುನಿಟ್ಟಾಗಿದ್ದಲ್ಲಿ ಮಾತ್ರ, ಹೆಚ್ಚಿನ ಲಾಭಾಂಶ. ಆತ್ಮವಿಶ್ವಾಸದಿಂದ ಆರಂಭಿಸಿದ ಹೊಸ ಉದ್ಯಮ ಲಾಭ ತರಲಿದೆ. ಸೋದರನೊಂದಿಗೆ ಸಣ್ಣ ಮಟ್ಟದ ಘರ್ಷಣೆಯಾಗುವ ಸಂಭವ ವಿದೆ. ಸಗಟು ವ್ಯಾಪಾರದಲ್ಲಿ ಚೇತರಿಕೆ ಕಂಡು ಬರಲಿದೆ. ನಿವೃತ್ತಿಯಂಚಿನಲ್ಲಿರುವವರು, ಮುಂದಿನ ಭವಿಷ್ಯದ ಬಗ್ಗೆ ಈಗಲೇ ಚಿಂತಿಸುವುದು ಉತ್ತಮ. ಆತ್ಮೀಯರ ಭೇಟಿ ಮುದ ನೀಡಲಿದೆ. ಮಿತಿ ಮೀರುತ್ತಿರುವ ಖರ್ಚಿಗೊಂದು ಕಡಿವಾಣ ಹಾಕದಿದ್ದಲ್ಲಿ, ಉಳಿತಾಯದ ಗಂಟೂ ಕರಗಬಹುದು. ಗೋ ಸೇವೆಯಿಂದ ಪುಣ್ಯ ಗಳಿಸುವಿರಿ. ಸೋಮ, ಬುಧ, ಗುರು ಶುಭ ದಿನಗಳು.

**ವಿಶೇಷ ದಿನಗಳು : ದಿನಾಂಕ : 14.11.2020 ಭಾನುವಾರ, ಬಲಿಪಾಡ್ಯಮಿ,**
**ದಿನಾಂಕ : 15.11.2020 ಸೋಮವಾರ, ಯಮದ್ವಿತೀಯ**
**ದಿನಾಂಕ : 16.11.2020 ಮಂಗಳವಾರ, ಭಗಿನೀ ತೃತೀಯಾ.**

## ನೀವೇನಂತೀರಿ?

ಶಬ್ದ ಮಾಲಿನ್ಯ, ವಾಯು ಮಾಲಿನ್ಯ
ತಡೆಯಲು ಹಚ್ಚಿರಿ ಹಸಿರು ಪಟಾಕಿ.....
ಜ್ಞಾನ ಮಾಲಿನ್ಯ, ಮಾನಸ ಮಾಲಿನ್ಯ
ನಿವಾರಿಸಲು ಹಾರಿಸಿ ಹಾಸ್ಯ ಚಟಾಕಿ.....
ಕತ್ತಲು ಮಾರಿ ಬೆಳಕು ಕೊಳ್ಳಿ ಅಂತಾನೆ
ಕೊಂಕೊತಿಮ್ಮ!?

-ಮಹಾಂತೇಶ್.ಬಿ.ನಿಟ್ಟೂರ್
ದಾವಣಗೆರೆ.

## ದಿನದ ಚುಟುಕು

ಬೆಳಕಿನಲ್ಲಡಗಿದ ಕತ್ತಲು
ಬೀರಿತು ಬೆಳಕು ಸುತ್ತಲು
ಪರಿಭ್ರಮಣೆಯಲ್ಲಿ ಮುತ್ತಲು
ದೇವರಲ್ಲವೇ ನಮಗೆ ಕಾವಲು !

- ವೀಕೆಎಂ.

# ಭದ್ರಾ ಜಲಾಶಯದಿಂದ ಚಿಕ್ಕಮಗಳೂರು ಜಿಲ್ಲೆಗಳ 192 ಕೆರೆ ತುಂಬಿಸುವ ಯೋಜನೆಗೆ ರೈತರ ವಿರೋಧ

ಮಲೇಬೆನ್ನೂರು, ನ. 14 - ಲಕ್ಕವಳ್ಳಿಯ ಭದ್ರಾ ಜಲಾಶಯದಿಂದ ಚಿಕ್ಕಮಗಳೂರು ಜಿಲ್ಲೆಯ 192 ಕೆರೆಗಳಿಗೆ ನೀರು ತುಂಬಿಸುವ ಸರ್ಕಾರದ ಹೊಸ ಯೋಜನೆಗೆ ಮಲೇಬೆನ್ನೂರು ಹೋಬಳಿ ರೈತರು ವಿರೋಧ ವ್ಯಕ್ತಪಡಿಸಿದ್ದಾರೆ.

ರಾಜ್ಯ ಸಚಿವ ಸಂಪುಟದಲ್ಲಿ ಹೊಸ ಯೋಜನೆ ಮಂಜೂರಾತಿಗೆ ಒಪ್ಪಿಗೆ ನೀಡಿರುವುದನ್ನು ವಿರೋಧಿಸಿದ ಹೊಳೆಸಿರಿಗೆರೆ ರೈತ ಮುಖಂಡ ಪಾಲಾಕ್ಷಪ್ಪ, ಮಳೆಗಾಲದ ವೇಳೆ ನದಿಯಲ್ಲಿ ವ್ಯರ್ಥವಾಗಿ ಹರಿದು ಸಮುದ್ರ ಸೇರುವ ನೀರನ್ನು ಪಂಪ್ ಮೂಲಕ ಹರಿಸಿ ಕೆರೆ ತುಂಬಿಸಲಿ. ಭದ್ರಾ ಜಲಾಶಯದ ಕೊನೆ ಭಾಗವು ಈಗಲೂ ನಾಲೆ ನೀರಿನಿಂದ ವಂಚಿತವಾಗಿದೆ. ಮಲೆನಾಡಿನ ಕೆರೆಗಳಿಗೆ ಅಣೆಕಟ್ಟೆಯಿಂದ ನೇರವಾಗಿ ನೀರು ಪಂಪ್ ಮಾಡುವುದು ಅವೈಜ್ಞಾನಿಕ. ಈಗ ಜಾರಿಯಲ್ಲಿರುವ ಕೆರೆಗೆ ನೀರು ತುಂಬಿಸುವ ಯೋಜನೆಗಳನ್ನು ಮೊದಲು ಪೂರ್ಣ ಮಾಡಿ ಎಂದು ಒತ್ತಾಯಿಸಿದರು.

ಜಿಲ್ಲಾಧಿಕಾರಿ, ಉಪ ವಿಭಾಗಾಧಿಕಾರಿ, ತಹಸೀಲ್ದಾರ್, ಬೆಸ್ಕಾಂ ನೀರಾವರಿ ನಿಗಮದ ಇಂಜಿನಿಯರ್, ಅಕ್ರಮ ಪಂಪ್ ಸೆಟ್ ತೆರವು ಮಾಡುವ ನ್ಯಾಯಾಲಯದ ಆದೇಶ ಉಲ್ಲಂಘಿಸಿದ್ದಾರೆ ಎಂದು ಆಪಾದಿಸಿದರು.

ಈಗಾಗಲೇ ವಿ.ವಿ.ಸಾಗರ, ಚಿತ್ರದುರ್ಗ, ತುಮಕೂರು ಜಿಲ್ಲೆಗೆ ಭದ್ರಾ ಜಲಾಶಯದಿಂದ ನೀರು ಹರಿಸುವ ಯೋಜನೆ ಜಾರಿಯಾಗಿದೆ. ಹೊಸ ಯೋಜನೆ ಅನುಷ್ಠಾನದಿಂದ ದಾವಣಗೆರೆ ಜಿಲ್ಲೆ ಬರದ ನಾಡಾಗಲಿದೆ. ತುಂಗಭದ್ರಾ ನದಿ ಯಿಂದ ಭೈರನಪಾದ ಏತ ನೀರಾವರಿ ಯೋಜನೆ ಅನುಷ್ಠಾನ ಮಾಡಿ ಕೊನೆ ಭಾಗಕ್ಕೆ ನೀರು ಹರಿಸಿ ಎಂದು ಆಗ್ರಹಿಸಿದರು.

ರಾಜಕಾರಣಿಗಳ ಒತ್ತಡದಿಂದ ಕೆರೆ ತುಂಬಿಸುವ ಯೋಜನೆ ರೂಪಿಸಿ, ಅನುಷ್ಠಾನಗೊಳಿಸಲು ಮುಂದಾದರೆ ಉಗ್ರ ಹೋರಾಟ, ಪ್ರತಿಭಟನೆ ನಡೆಸಲಾಗುವುದು ಎಂದು ರೈತ ಸಂಘ ಹಸಿರು ಸೇನೆ ಜಿಲ್ಲಾಧ್ಯಕ್ಷ ಕಡಾರನಾಯ್ಕನಹಳ್ಳಿ ಪ್ರಭುಗೌಡ ಎಚ್ಚರಿಸಿದ್ದಾರೆ.

ಮಲೆನಾಡಿನಲ್ಲಿ ನಿರ್ಮಿಸಿದ ಅಣೆಕಟ್ಟೆ ಯಿಂದ ನೀರೆತ್ತುವ ಯೋಜನೆ ಅತ್ಯಂತ ಅಪಾ ಯಕಾರಿ. ಇಂತಹ ಯೋಜನೆ ಜಾರಿಗೊಳಿಸಲು ಬಿಡುವುದಿಲ್ಲ. ಶೀಘ್ರ ಕೊನೆ ಭಾಗದ ರೈತರೊಟ್ಟಿಗೆ ಸಭೆ ನಡೆಸಿ, ತೀರ್ಮಾನಿಸಲಾಗು ವುದು ಎಂದು ಹೇಳಿದರು.

## ಈ ಬಾರಿ ಸರಳ ಆಚರಣೆಯ ದೀಪಾವಳಿ




ಹರಿಹರ, ನ.14- ನಗರದಲ್ಲಿ ಈ ಬಾರಿಯ ದೀಪಾವಳಿ ಹಬ್ಬದ ಆಚರಣೆ ಸರಳ ರೀತಿಯಲ್ಲಿ ಮಾಡಲಾಗುತ್ತಿದೆ.

ಕಳೆದ ವರ್ಷಗಳಲ್ಲಿ ದೀಪಾವಳಿ ಹಬ್ಬದ ವೇಳೆ ಪ್ರತಿ ಮನೆ ಮನೆಯಲ್ಲೂ ಎದ್ದು ಕಾಣುತ್ತಿತ್ತು. ಬಟ್ಟೆ ಅಂಗಡಿಗಳು ಖರೀದಿದಾರರಿಂದ ತುಂಬಿ ತುಳುಕುತ್ತಿತ್ತು. ಅಂಗಡಿಗಳಲ್ಲಿ, ಮಾರುಕಟ್ಟೆಗಳಲ್ಲಿ ಹಬ್ಬದ ಖರೀದಿ ಜೋರಾಗಿತ್ತು. ಆದರೆ ಕೊರೊನಾ ಭಯದಿಂದಾಗಿ ರಸ್ತೆ, ಮಳಿಗೆಗಳ ಬಳಿ ಜನ ಜಂಗುಳಿ ಕಾಣುತ್ತಿಲ್ಲ. ಸಂಪ್ರದಾಯಕ್ಕೆ ಅಗತ್ಯವಿರುವಷ್ಟು ಮಾತ್ರ ಆಚರಣೆಗೆ ಚ್ಯುತಿ ಬಾರದಂತೆ ಖರೀದಿ ನಡೆಯುತ್ತಿದೆ.

ಜೊತೆಗೆ ಎರಡು ದಿನ ಅಮಾವಾಸ್ಯೆ ಇರುವುದರಿಂದ ಯಾವ ಸಮಯದಲ್ಲಿ ಪೂಜೆ ಮಾಡಬೇಕು ಎನ್ನುವ ಸಂದೇಹಗಳು ಜನರಲ್ಲಿ ಮೂಡಿದೆ. ದೀಪಾವಳಿ ಹಬ್ಬದ ಸಮಯದಲ್ಲಿ ಸರ್ಕಾರ ದಿನಕ್ಕೊಂದು ಕಾನೂನು ತಂದಿದ್ದರಿಂದ ಸಾರ್ವಜನಿಕರು ಪಟಾಕಿ ಹಾರಿಸಬೇಕೇ ಅಥವಾ ಬೇಡವೇ ಎಂಬ ಗೊಂದಲ ಮಾಡಿಕೊಂಡು, ನಮ್ಮ ಅಂಗಡಿಗಳಿಗೆ ಭೇಟಿ ನೀಡುತ್ತಿದ್ದಾರೆ. ನಾವು ಲಕ್ಷಾಂತರ ಬಂಡವಾಳ ಹೂಡಿಕೆ ಮಾಡಿ ಚಿಂತಿಸುವ ಪರಿಸ್ಥಿತಿ ಬಂದಿದೆ ಎನ್ನುತ್ತಾರೆ ಪಟಾಕಿ ವ್ಯಾಪಾರಿ ಜ್ಞಾನೇಶ್ವರ್.

ಗೃಹಿಣಿ ಕೆ.ಸಿ. ಶಾಂತಕುಮಾರಿ ಹೇಳುವಂತೆ ಈ ಬಾರಿ ಆಚರಣೆ ಸರಳವಾಗಿದೆ. ಕಾರಣ ಆರ್ಥಿಕ ತೊಂದರೆ ಇದೆ. ಸಾಲ ಮಾಡಿ ಮಾಡಿದರೆ ಅದನ್ನು ತೀರಿಸಲು ಮುಂದೆ ಸಾಧ್ಯವೇ? ಎಂಬ ಅನುಮಾನ ಮೂಡಿರುವುದರಿಂದ ಸರಳ ಆಚರಣೆಗ ಮುಂದಾಗಿದ್ದೇವೆ ಎನ್ನುತ್ತಾರೆ.

## ಕೂಡ್ಲಿಗಿಯಲ್ಲಿ ಹಣತೆ, ಹೂ ಕೊಳ್ಳಲು ಮುಗಿಬಿದ್ದ ಜನತೆ : ಗಗನಕ್ಕೇರಿದ ಹೂವಿನ ಬೆಲೆ



ಕೂಡ್ಲಿಗಿ, ನ.14- ಪಟ್ಟಣದಲ್ಲಿ ದೀಪಾವಳಿಯ ಸಡಗರ ಶನಿವಾರ ಬೆಳಿಗ್ಗೆಯಿಂದಲೇ ಜೋರಾಗಿಯೇ ಸಾಗಿತು. ಪಟ್ಟಣ ಸೇರಿದಂತೆ ಹಳ್ಳಿಗಳಿಂದ ಬಂದ ಜನತೆ ದೀಪಾವಳಿ ಹಬ್ಬಕ್ಕೆ ಹೂ, ಹಣತೆ, ಬಾಳೆದಿಂಡುಗಳನ್ನು ಕೊಳ್ಳಲು ಮುಗಿಬಿದ್ದರು. ವ್ಯಾಪಾರಿಗಳು ಖುಷಿಯಿಂದಲೇ ಗ್ರಾಹಕ ರೊಂದಿಗೆ ವ್ಯವಹಾರ ನಡೆಸಿದರು.

ನೂರು ರೂಪಾಯಿಗೆ ಒಂದು ಮಾರು ಸೇವಂತಿಗೆ ಹೂವನ್ನು ಗ್ರಾಹಕರು ಖರೀದಿಸಿದರು. ಮಲ್ಲಿಗೆ, ಕಾಕಡವಂತೂ ನೂರು ರೂಪಾಯಿ ಮೀರಿತ್ತು. ಹೀಗಾಗಿ ಬೆಲೆ ಗಗನಕ್ಕೇರಿದರೂ ಹಬ್ಬಕ್ಕೆ ಜನತೆ ಕೊಳ್ಳಲೇಬೇಕಾಯಿತು.

ತರಕಾರಿ ಸೇರಿದಂತೆ, ಹಬ್ಬದ ಸಾಮಗ್ರಿಗಳು ಈ ಬಾರಿ ದುಬಾರಿಯಾಗಿದ್ದರೂ ಗ್ರಾಹಕರಿಗೆ ಮಾತ್ರ ಕೊರತೆ ಇರಲಿಲ್ಲ.

ವ್ಯಾಪಾರಿ ಗಳು, ಅಂಗಡಿ ಮುಂಗಟ್ಟುಗಳ ಮಾಲೀ ಕರು ತಮ್ಮ ಅಂಗಡಿಗಳನ್ನು ಶೃಂಗರಿಸಿ ಶನಿವಾರ ಸಂಜೆ ಲಕ್ಷ್ಮಿ ಕೂರಿಸಿ ತಮ್ಮ ಸಂಬಂಧಿಕರು, ಸ್ನೇಹಿತರ ಜೊತೆ ಸಿಹಿ ಭೋಜನ ಸವಿದು ಬೆಳಕಿನ ಹಬ್ಬ ದೀಪಾವಳಿ ಯನ್ನು ಸಡಗರ, ಸಂಭ್ರಮದಿಂದ ಆಚರಿಸಿದರು.

## ರಾಣೇಬೆನ್ನೂರಿನ ಖನ್ನೂರ ಶಾಲೆಯಲ್ಲಿ ವಾಲ್ಮೀಕಿ ಜಯಂತಿ

ರಾಣೇಬೆನ್ನೂರು, ನ.14- ಖನ್ನೂರ ವಿದ್ಯಾನಿಕೇತನ ಸ್ಕೂಲ್ ವತಿಯಿಂದ ಆನ್‌ಲೈನ್‌ನಲ್ಲಿ ವಾಲ್ಮೀಕಿ ಜಯಂತಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಸೊಸೈಟಿ ಕಾರ್ಯದರ್ಶಿ ಡಾ. ಪ್ರವೀಣ ಎಂ. ಖನ್ನೂರ ಹಾಗೂ ಖಜಾಂಚಿ ಡಾ. ಶೈಲಶ್ರೀ ಪಿ. ಖನ್ನೂರ ಮಾರ್ಗದರ್ಶನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಾಂಶುಪಾಲ ಡಾ. ಮಹಾಂತೇಶ ಆರ್. ಕಮ್ಮಾರ, ಪೂರ್ವ ಪ್ರಾಥಮಿಕ ಶಾಲೆಯ ಮುಖ್ಯಶಿಕ್ಷಕಿ ಲೀಲಾವತಿ ಉಪಸ್ಥಿತರಿದ್ದರು.

ವಿದ್ಯಾರ್ಥಿನಿಯರಾದ ಸಾನಿಕಾ ಪವಾರ ಸ್ವಾಗತಿಸಿದರು. ಜೆ.ಹೆಚ್. ಐಮಾನ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಸಿ.ಯು. ಶ್ರೇಯಾ ವಂದಿಸಿದರು. ಎಂ.ಟಿ. ಸ್ಪಂದನಾ ನಿರೂಪಿಸಿದರು.

## 'ವ್ಯಕ್ತಿ ಸ್ವಾತಂತ್ರ್ಯ'ದಲ್ಲಿ ಯಾರಿಗೂ ಒಳಪ್ರವೇಶವಿಲ್ಲ : ಶಾಸ್ತ್ರಿ

ದಾವಣಗೆರೆ, ನ.14- ಭಾರತ ಸಂವಿಧಾನದಲ್ಲಿ ಪ್ರತಿಯೊಬ್ಬ ನಾಗರಿಕರಿಗೂ ವ್ಯಕ್ತಿ ಸ್ವಾತಂತ್ರ್ಯ ನೀಡಿದ್ದು, ಇಲ್ಲಿ ಯಾವ ಸರ್ಕಾರವಾಗಲೀ ಅಥವಾ ಬೇರೆ ಯಾರೂ ಕೂಡ ಒಳಪ್ರವೇಶ ಮಾಡುವಂತಿಲ್ಲ ಎಂದು ಕರ್ನಾಟಕ ಪ್ರದೇಶ ರೈತ ಸಂಘದ ಅಧ್ಯಕ್ಷ ಎಂ.ಎಸ್.ಕೆ. ಶಾಸ್ತ್ರಿ ಹೇಳಿದ್ದಾರೆ.

ಪ್ರವೇಶಿಸಿದಲ್ಲಿ ಪರ್ಸನಲ್ ಲಿಬರ್ಟಿ ಹಕ್ಕಿಗೆ ಚ್ಯುತಿ ಉಂಟಾಗುತ್ತದೆ.

ಒಳಪ್ರವೇಶಗಳು ಮತ್ತು ಹುನ್ನಾರಗಳನ್ನು ನಡೆಸುತ್ತಾ ಹೋದರೆ ಪರ್ಸನಲ್ ಲಿಬರ್ಟಿ ಕಾನೂನನ್ನು ಹತ್ತಿಕ್ಕಿದಂತಾಗುತ್ತದೆ. ದೇಶ ವಿನಾಶದ ಅಂಚಿಗೆ ಹೋಗುತ್ತದೆ ಎಂದು ಶಾಸ್ತ್ರಿ ಹೇಳಿದ್ದಾರೆ.

## ಲಯನ್ಸ್ ನಿಂದ ಆವರಗೆರೆಯ ಗೋಶಾಲೆಗೆ ಹುಲ್ಲು ವಿತರಣೆ



ದಾವಣಗೆರೆ, ನ.14- ಆವರಗೆರೆಯ ಗೋಶಾಲೆಯ ರಾಸುಗಳಿಗೆ ನಗರದ ಲಯನ್ಸ್ ಕ್ಲಬ್ ವತಿಯಿಂದ ಎರಡು ಲೋಡ್ ಹುಲ್ಲನ್ನು ಕ್ಲಬ್ಬಿನ ಅಧ್ಯಕ್ಷ ಕೆ.ಎಂ. ವಿಜಯಕುಮಾರ್ ಅಧ್ಯಕ್ಷತೆಯಲ್ಲಿ ಇಂದು ನೀಡಲಾಯಿತು. ಕ್ಲಬ್ಬಿನ ಹಿರಿಯ ಸದಸ್ಯರೂ, ಮಾಜಿ ಅಧ್ಯಕ್ಷರೂ ಆಗಿರುವ ಹುಲ್ಲಿನ ದಾನಿ ಟಿ.ಎಂ.ಪಂಚಾಕ್ಷರಯ್ಯ, ಪಾಲಿಕೆ ಮಾಜಿ ಸದಸ್ಯ ದಿನೇಶ್ ಕೆ.ಶೆಟ್ಟಿ, ಲಯನ್ಸ್ ಟ್ರಸ್ಟ್ ಕಾರ್ಯದರ್ಶಿ ಅಜ್ಜಂಪುರ ಶೆಟ್ರು ಮೃತ್ಯುಂಜಯ, ಹಿರಿಯ ಲೆಕ್ಕಪರಿಶೋಧಕ ಜಂಬಗಿ ರಾಧೇಶ್, ಲಯನ್ಸ್ ಖಜಾಂಚಿ ಸಂಪತ್ ಬಿ.ಹಳ್ಳಿಕೇರಿ, ಸಹ ಕಾರ್ಯದರ್ಶಿ ಎಸ್.ಕೆ.ಮಲ್ಲಿಕಾರ್ಜುನ್, ನಿರ್ದೇಶಕ ಎನ್.ಸಿ. ಬಸವರಾಜ್, ಪಾಲಿಕೆಯ ಗೋಪಿನಾಯ್ಕ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ಕುಂಬಳೂರಿನಲ್ಲಿ ಸಹಕಾರ ಸಪ್ತಾಹ



ಮಲೇಬೆನ್ನೂರು, ನ. 14- ಕುಂಬಳೂರು ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಅಖಿಲ ಭಾರತ ಸಹಕಾರ ಸಪ್ತಾಹದ ಅಂಗವಾಗಿ ಶನಿವಾರ ಸಂಘದ ಅಧ್ಯಕ್ಷ ಡಿ.ಕೆ. ಸ್ವಾಮಿ ಅವರು ಸಹಕಾರ ಧ್ವಜಾರೋಹಣ ನೆರವೇರಿಸಿದರು. ಸಂಘದ ಉಪಾಧ್ಯಕ್ಷ ಕೆ. ತಿಪ್ಪೇಸ್ವಾಮಿ, ನಿರ್ದೇಶಕರಾದ ಕರಡಿ ಸೋಮಶೇಖರ್, ಬಿ.ಕೆ. ಹನುಮೇಶ್, ಎಂ. ವಾಸುದೇವಮೂರ್ತಿ, ಹಾಲಮ್ಮ ಕೆ. ಕುಮಾರ, ಹಳೇಮನೆ ಆಂಜನೇಯ, ಆರ್. ವೀರಭದ್ರಪ್ಪ, ವಿರೂಪಾಕ್ಷಪ್ಪ, ಸಂಘದ ಸಿಇಓ ಯಶೋಧಮ್ಮ ಈ ವೇಳೆ ಹಾಜರಿದ್ದರು.

## ರಾಣೇಬೆನ್ನೂರಿನಲ್ಲಿ ವೈದ್ಯರಿಗೆ ಕೋವಿಡ್ ರಕ್ಷಣಾ ಕವಚ ವಿತರಣೆ



ರಾಣೇಬೆನ್ನೂರು, ನ.14- ಸ್ಥಳೀಯ ಪಿಕೆಕೆ ಸಂಸ್ಥೆಯ ಅಧ್ಯಕ್ಷ ಪ್ರಕಾಶ ಕೋಳಿವಾಡ ಗ್ರಾಮೀಣ ಭಾಗದ ವೈದ್ಯರು ಹಾಗೂ ಸಿಬ್ಬಂದಿಯವರಿಗೆ ಕೋವಿಡ್ ವಿರುದ್ಧ ಹೋರಾಡಲು ರಕ್ಷಣಾ ಕವಚಗಳನ್ನು ನೀಡಿದರು.

ತಾಲ್ಲೂಕು ವೈದ್ಯಾಧಿಕಾರಿ ಡಾ. ಸಂತೋಷ ಕಿಟ್‌ಗಳನ್ನು ಸ್ವೀಕರಿಸಿದರು. ಮುಖಂಡರುಗಳಾದ ಬಿ.ಎಸ್. ಮರದ, ಬಸವರಾಜ ಹುಚ್ಚಗೊಂಡರ, ಇರ್ಶಾದ್ ಬಳ್ಳಾರಿ, ಇರ್ಫಾನ್ ಗುಡಗೂರ, ಪುಟ್ಟಪ್ಪ ಮರಿಯಮ್ಮನವರ ಇನ್ನಿತರರಿದ್ದರು.

## ಅಂಗನವಾಡಿ ಶಿಕ್ಷಕಿಯರಿಗೆ ತರಬೇತಿ




ಹರಿಹರ, ನ.14- ದೀಟೂರು ಗ್ರಾಮದ ಅಂಗನವಾಡಿ ಕೇಂದ್ರದಲ್ಲಿ ಕೊಂಡಜ್ಜಿ ವೃತ್ತದ 27 ಅಂಗನವಾಡಿ ಕೇಂದ್ರದ ಶಿಕ್ಷಕಿಯರಿಗೆ ಮೊಬೈಲ್ ಬಳಕೆ ಕುರಿತು ಮಾಹಿತಿ ತರಬೇತಿಯನ್ನು ವೃತ್ತ ಮೇಲ್ವಿಚಾರಕಿ ಶಾಂತಮ್ಮ ನೀಡಿದರು. ಈ ಸಂದರ್ಭದಲ್ಲಿ ಗುತ್ತೂರು ಬಿ.ಎಸ್. ನಿರ್ಮಲ, ಜಯಮ್ಮ, ಎನ್.ಜಿ. ರೇಣುಕಾ, ಎಸ್.ಆರ್. ಮಂಜುಳಾ, ಗಂಗನರಸಿ ಭಾಗ್ಯ, ಅರುಣಾ, ದೀಟೂರು ಲಕ್ಷ್ಮಿ, ಚೆನ್ನಮ್ಮ, ಪಾಮೇನಹಳ್ಳಿ ಎನ್.ಎಸ್. ರೇಣುಕಾ, ಸಾರಥಿ ಕೆ. ಮಂಜುಳಾ, ವನಮಾಲಾ, ಚಿಕ್ಕಬಿದರಿ ಸಾವಿತ್ರಾ ಪಾಟೀಲ, ಕೊಂಡಜ್ಜಿ ಯಶೋದಮ್ಮ, ರುದ್ರಮ್ಮ, ಕುರುಬರಹಳ್ಳಿ ಹನುಮಮ್ಮ, ಕರಲಹಳ್ಳಿ ನಾಜಿಯಾ, ಬುಳ್ಳಾಪುರ ಬಸಮ್ಮ ಇನ್ನಿತರರಿದ್ದರು.

## ನಗರಕ್ಕೆ ನಾಳೆ ಉಸ್ತುವಾರಿ ಸಚಿವ ಭೈರತಿ

ದಾವಣಗೆರೆ, ನ. 14- ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ.ಬಸವರಾಜ್ ಅವರು ನಾಡಿದ್ದು ದಿನಾಂಕ 16 ರ ಸೋಮವಾರ ನಗರಕ್ಕೆ ಆಗಮಿಸಲಿದ್ದಾರೆ. ಸಚಿವರು ಅಂದು ಬೆಳಿಗ್ಗೆ 6 ಗಂಟೆಗೆ ಬೆಂಗಳೂರಿನಿಂದ ಹೊರಟು 9 ಗಂಟೆಗೆ ನಗರದ ಪ್ರವಾಸಿ ಮಂದಿರಕ್ಕೆ ಆಗಮಿಸುವರು. ನಂತರ ಬೆಳಿಗ್ಗೆ 11 ಕ್ಕೆ ಬಾಪೂಜಿ ಬ್ಯಾಂಕ್ ಸಮುದಾಯ ಭವನ ದಲ್ಲಿ ಏರ್ಪಡಿಸಲಾಗಿರುವ ಸಹಕಾರ ಸಪ್ತಾಹ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಧ್ಯಾಹ್ನ 2.30 ಕ್ಕೆ ನಗರದಿಂದ ನಿರ್ಗಮಿಸುವರು.

## ದೀಪಾವಳಿ ಶುಭಾಶಯಗಳು

ದೀಪಾವಳಿ ಹಬ್ಬದ ಶುಭಾಶಯಗಳು
ದೀಪದಂತೆ ಬಾಳಿರಿ ಶುಭಾಶಯಗಳು
ಕೋಪ ತಾಪ ಸುಟ್ಟು ತಾಪತ್ರಯ ಕಳೆದು
ಅಪರೂಪದ ಆನಂದದಿ ಸದಾ ಸುಖಿಸಿರಿ

ಕಷ್ಟಗಳ ಕತ್ತಲೆಯ ಹೊರ ದೂಡುತ
ನಷ್ಟಗಳ ಬಲೆಯಿಂದ ಹೊರಚಿಮ್ಮುತ
ನಿಷ್ಠೆ ಶ್ರದ್ಧೆ ಭಕ್ತಿಯಿಂದ ದುಡಿದು ಏರುತ
ಶ್ರೇಷ್ಠ ದೀಪದಂತೆ ಜಗಕೆ ಬೆಳಕ ನೀಡುತ

ತಾನು ಉರಿದು ತನ್ನವರಿಗೆ ಬೆಳಕ ಕೊಡುವುದು
ತನ್ನಲೆಣ್ಣೆ ಇರುವವರೆಗು ಉರಿಯುತಿರುವುದು
ತನ್ನೊಳಗೆ ತೃಪ್ತಿಯಲ್ಲಿ ತಾನು ನಲಿಯುವುದು
ಹೊನ್ನ ಕಿರಣದಿಂದ ಸಂತಸ ತರುವುದು

ಪರಮಾತ್ಮನ ಪ್ರೀತಿಗೆ ದೀಪ ಹಚ್ಚುವ
ಅರಿವನು ನಮ್ಮೊಳಗೆ ನಾವು ಕಾಣುವ
ಸಿರಿಹರಿ ಕೊಟ್ಟಿಹ ಸುಖದಲಿ ನಲಿವ
ನಿರುಪಮ ಶಕ್ತಿಗೆ ಶರಣಾಗುವ

**- ಶ್ರೀ ಕೃಷ್ಣಾರ್ಪಣಮಸ್ತು**
**ರೂಪಶ್ರೀ ಶಶಿಕಾಂತ್**


## ಚಿತ್ರಕವಿತ್ವ ಮಹತ್ವವಾದ ಒಂದು ಕಾವ್ಯ- ಅಕ್ಷರ ಮಾಂತ್ರಿಕ ಅಮೋಘಂಚೈತ್ರ ಕಾರಂಜಿ

ದಾವಣಗೆರೆ, ನ. 14 - ಕನ್ನಡ ಸಾಹಿತ್ಯದಲ್ಲಿ ಚಿತ್ರಕವಿತ್ವ ಮಹತ್ವವಾದ ಒಂದು ಕಾವ್ಯ ಪ್ರಕಾರವಾಗಿದೆ. ಅದರಲ್ಲಿ ಹಾರಬಂಧ ಪದ್ಯಮಾಲೆ ತನ್ನ ವಿಶೇಷ ಸ್ಥಾನವನ್ನು ಪಡೆದಿದೆ. ನೋಡಲಿಕ್ಕೆ ಹೂವಿನಹಾರ ಮತ್ತು ಪದಕದಂತೆ ಗೋಚರಿಸುತ್ತದೆ. ಈ ರಚನೆಗೆ ನನಗೆ ಪ್ರೇರಣೆ ನೀಡಿದವರು ಅವಿಳಂಧ ಪುರುಷ ಸರಸ್ವತಿ ಶತಾವಧಾನಿ ಡಾ. ರಾ. ಗಣೇಶರವರು. ಅವರ ಕೆಲವು ಕಾರ್ಯಕ್ರಮದಲ್ಲಿ ಪಾಲ್ಗೊಂಡ ಹೆಮ್ಮೆ ನನ್ನದು ಎಂದು ಹಿರಿಯ ಕವಿ, ಅಕ್ಷರ ಮಾಂತ್ರಿಕ ಅಮೋಘಂಚೈತ್ರ ಕಾರಂಜಿ ಅವರು ತಿಳಿಸಿದರು.

ಗ್ರಂಥಸರಸ್ವತಿ ಪ್ರತಿಭಾರಂಗವು ನವೆಂಬರ್ 1 ರಿಂದ ಇದೇ ದಿನಾಂಕ 30 ರವರೆಗೆ ಹಮ್ಮಿಕೊಂಡಿರುವ ಕನ್ನಡಕಬ್ಬ ಉಗಾದಿಹಬ್ಬ ಕವಿಕಾವ್ಯ ಚಿಂತನಾ ಗೋಷ್ಠಿಯ 13ನೇಯ ದಿನದ ಅತಿಥಿಗಳಾಗಿ ಆಗಮಿಸಿದ್ದ ಅಕ್ಷರ ಮಾಂತ್ರಿಕ ಅಮೋಘಂಚೈತ್ರ ಕಾರಂಜಿ ಅವರು ಹಾರಬಂಧವು ಪದ್ಯ ಸಾಹಿತ್ಯದಲ್ಲೂ ಪದಕವು ಗದ್ಯಸಾಹಿತ್ಯವನ್ನೂ ಒಳಗೊಂಡಿರುತ್ತದೆ. ಪದಕದ ಮಧ್ಯಾಕ್ಷರಗಳು ವಿಶೇಷ ಪದ ಸಂಯೋಜನೆಗಳಿಂದ ಕೂಡಿರುತ್ತವೆ. ಇದನ್ನು ಪದಪುಂಜ ಎಂದು ಕರೆಯಲಾಗುತ್ತದೆ ಎಂದು ತಾವು ರಚಿಸಿರುವ ಹತ್ತಾರು ಹಾರಬಂಧಗಳನ್ನು ವಿವರಿಸಿದರು.


ವಾಲ್ಮೀಕಿ, ಪಂಪ, ಬಸವಣ್ಣ, ರವೀಂದ್ರನಾಥ್ ಠಾಕೂರ್, ಕುವೆಂಪು, ಡಾ. ಎಸ್. ಬಾಲಸುಬ್ರಮಣ್ಯಂ, ವಿಶ್ವ ಸರಳ ದಿನಾಚಾರಣೆ, ಪುಸ್ತಕ ದಿನಾಚರಣೆಗಳ ಬಗ್ಗೆ ಅಕ್ಷರ ಮಾಂತ್ರಿಕ ಅಮೋಘಂಚೈತ್ರ ಕಾರಂಜಿ ರಚಿಸಿದ ಅಕ್ಷರಾಕ್ಷರ ಪದಪುಂಜದ ರಚನೆಗಳನ್ನು ಆರ್.ಶಿವಕುಮಾರಸ್ವಾಮಿ ಕುರ್ಕಿ ಭಾವಪೂರ್ಣವಾಗಿ ವಾಚಿಸಿದರು.

## ಶ್ರೀಮತಿ ವಿಮಲಮ್ಮ ನಿಧನ




ದಾವಣಗೆರೆ ಕೆ.ಟಿ.ಜೆ. ನಗರ 1ನೇ ಕ್ರಾಸ್ ವಾಸಿ ದಿ.ಶಿವಮೂರ್ತಯ್ಯ ವಿ. ಇವರ ಧರ್ಮಪತ್ನಿ ಶ್ರೀಮತಿ ವಿಮಲಮ್ಮ (69) ಅವರು ದಿನಾಂಕ 14.11.2020 ರ ಶನಿವಾರ ಬೆಳಿಗ್ಗೆ 7.30ಕ್ಕೆ ನಿಧನರಾದರು. ಓರ್ವ ಪುತ್ರ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 14.11.2020 ರ ಶನಿವಾರ ಸಂಜೆ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಿತು.

## ಶ್ರೀಮತಿ ಪಾರ್ವತಮ್ಮ ನಿಧನ




ದಾವಣಗೆರೆ ತಾ|| ಜಿ||, ಐಗೂರು ಗ್ರಾಮದ ಹುಣಸೆಕಟ್ಟೇರ ಹೆಚ್.ಎಸ್. ರೇವಣಸಿದ್ದಪ್ಪನವರ ಧರ್ಮಪತ್ನಿ ಶ್ರೀಮತಿ ಪಾರ್ವತಮ್ಮ ಅವರು ದಿನಾಂಕ 14.11.2020 ರ ಶನಿವಾರ ಬೆಳಿಗ್ಗೆ 11.15ಕ್ಕೆ ನಿಧನರಾಗಿದ್ದಾರೆ. ಐವರು ಪುತ್ರಿಯರು, ಓರ್ವ ಪುತ್ರ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 15.11.2020 ರಂದು ಭಾನುವಾರ ಮಧ್ಯಾಹ್ನ 12 ಗಂಟೆಗೆ ಐಗೂರು ಗ್ರಾಮದಲ್ಲಿ ನೆರವೇರಿಸಲಾಗುವುದು.

## ಶ್ರೀಮತಿ ಗೌರಮ್ಮ ನಿಧನ



ದಾವಣಗೆರೆ ಜಿಲ್ಲೆ ನ್ಯಾಮತಿ ತಾ. ಕಂಕನಹಳ್ಳಿ ಗ್ರಾಮದ ಶ್ರೀ ರುದ್ರಪ್ಪ ಅರೇಹಳ್ಳಿ ಪಾಲ್ದಾರ್ ಗೌಡ್ರು (ಮಲ್ಲಜ್ಜರ ಮನೆ) ಇವರ ಧರ್ಮಪತ್ನಿ ಶ್ರೀಮತಿ ಗೌರಮ್ಮ ಅವರು ದಿನಾಂಕ 14.11.2020ರಂದು ಬೆಳಿಗ್ಗೆ 10.30ಕ್ಕೆ ದೈವಾಧೀನರಾಗಿದ್ದಾರೆ. ಮೃತರು ಏಳು ಜನ ಗಂಡು ಮತ್ತು ಮೂರು ಹೆಣ್ಣು ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು ಹಾಗೂ ಅಪಾರ ಬಂಧು-ಮಿತ್ರರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ದಿನಾಂಕ 15.11.2020ರಂದು ಸ್ವಗ್ರಾಮದಲ್ಲಿ ನೆರವೇರಿಸಲಾಗುವುದು.

## ಪಾಲ್ದಾರ್ ಗೌಡರ ಹನುಮಂತಪ್ಪ



ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲ್ಲೂಕು ಮರಬನಹಳ್ಳಿ ಗ್ರಾಮದ ವಾಸಿ ಶರಣ ಶ್ರೀ ಪಾಲ್ದಾರ್ ಗೌಡರ ಹನುಮಂತಪ್ಪ (96) ಅವರು ದಿನಾಂಕ 14.11.2020ರಂದು ದೈವಾಧೀನರಾಗಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 15.11.2020ರ ಬೆಳಿಗ್ಗೆ 10 ಗಂಟೆಗೆ ನೆರವೇರಿಸಲಾಗುವುದು.

# ದೀಪಾವಳಿಯ ಹಾರ್ದಿಕ ಶುಭಾಶಯಗಳು

ದೀಪ ಜ್ಞಾನದ ಸಂಕೇತ. ಕತ್ತಲೆ ಎಂಬ ಅಜ್ಞಾನವನ್ನು ಹೊಡೆದೋಡಿಸಿದಂತೆ, ದೀಪಾವಳಿ ಹಬ್ಬವು ತಮ್ಮ ಜೀವನದ ಕಷ್ಟ-ಕಾರ್ಪಣ್ಯವನ್ನು ದೂರ ಮಾಡಿ ಸುಖ, ಶಾಂತಿ, ನೆಮ್ಮದಿ ತರಲಿ. ನಾಡಿನ ಸಮಸ್ತ ಜನತೆಗೂ ಬೆಳಕಿನ ಹಬ್ಬ ದೀಪಾವಳಿಯ ಹಾರ್ದಿಕ ಶುಭಾಶಯಗಳು



**ಬಾಣದ ಅಂಜಿನಪ್ಪ,**
ಗುತ್ತಿಗೆ ದಾರರು ಹಾಗೂ ವಾಲ್ಮೀಕಿ ಸಮಾಜದ ಮುಖಂಡರು, ಹರಪನಹಳ್ಳಿ

**ತೆಲಗಿ ಟಿ.ಉಮಾಕಾಂತ,**
ಗುತ್ತಿಗೆ ದಾರರು ಹಾಗೂ ವಾಲ್ಮೀಕಿ ಸಮಾಜದ ಮುಖಂಡರು, ಹರಪನಹಳ್ಳಿ



**ನೀಲಗುಂದ ಬಿ. ವಾಗೀಶ,**
ವಕೀಲರು ಹಾಗೂ ವಾಲ್ಮೀಕಿ ಸಮಾಜದ ಮುಖಂಡರು.

**ಟಿ. ಕೆಂಚಪ್ಪ (ರಾಜ)**
ಗುತ್ತಿಗೆ ದಾರರು ಹಾಗೂ ವಾಲ್ಮೀಕಿ ಸಮಾಜದ ಮುಖಂಡರು, ಹರಪನಹಳ್ಳಿ

**ಪಿ.ಪರಶುರಾಮ**
ಗುತ್ತಿಗೆ ದಾರರು ಹಾಗೂ ವಾಲ್ಮೀಕಿ ಸಮಾಜದ ಮುಖಂಡರು, ಹರಪನಹಳ್ಳಿ

## ವಾಲ್ಮೀಕಿ ಸಮಾಜದ ಮುಖಂಡರು ಹರಪನಹಳ್ಳಿ.






# ನಾಡಿನ ಸಮಸ್ತ ಜನತೆಗೆ ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯಗಳು...



ದಾವಣಗೆರೆ ಜಿಲ್ಲೆಯ ಸಮಸ್ತ ಜನತೆಗೆ ಬೆಳಕಿನ ಹಬ್ಬ ದೀಪಾವಳಿಯು ಸುಖ, ಶಾಂತಿ, ಸಮೃದ್ಧಿ ತರಲೆಂದು ಶುಭ ಹಾರೈಸುತ್ತೇವೆ. ಮಹಾಮಾರಿ ಕೊರೊನಾ ಸೋಂಕಿನ ಬಗ್ಗೆ ಜನರು ನಿರ್ಲಕ್ಷ್ಯ ವಹಿಸದೆ ಜಾಗೃತಿ ವಹಿಸಬೇಕು. ಉತ್ತಮ ಆರೋಗ್ಯಕ್ಕಾಗಿ ಮಾಸ್ಕ್ ಧರಿಸುವುದು, ಸಾಮಾಜಿಕ ಅಂತರ ಮತ್ತು ಸ್ವಚ್ಛತೆಯನ್ನು ಸದಾ ಕಾಪಾಡೋಣ. ಈ ಬಾರಿ ದೀಪಾವಳಿ ಹಬ್ಬವನ್ನು ಕೊರೊನಾ ನಿಯಂತ್ರಿಸುವ ದೃಷ್ಟಿಯಿಂದ ಸರಳವಾಗಿ ಆಚರಿಸೋಣವೆಂದು ಈ ಮೂಲಕ ಪ್ರಾರ್ಥಿಸುತ್ತೇವೆ.



**ದಿ. ತಿಮ್ಲಾಪುರದ ಸಿದ್ದಪ್ಪ**
ಮಾಜಿ ಛೇರ್ಮನ್, ಯಕ್ಕನಹಳ್ಳಿ.



**ದಿ. ಸುಶೀಲಮ್ಮ ಬಸವರಾಜಪ್ಪ**
ಜಿ.ಪಂ. ಸದಸ್ಯರು, ಕುಂದೂರು ಕ್ಷೇತ್ರ



**ಶ್ರೀಮತಿ ದೀಪಾ ಜಗದೀಶ್**
ಅಧ್ಯಕ್ಷರು, ಜಿ. ಪಂ. ದಾವಣಗೆರೆ
ಕುಂದೂರು ಕ್ಷೇತ್ರ

**ಟಿ.ಎಸ್. ಜಗದೀಶ್**
ಬಿಜೆಪಿ ಮುಖಂಡರು
ಯಕ್ಕನಹಳ್ಳಿ.

**ಟಿ. ಬಸವರಾಜಪ್ಪ**
ಶ್ರೀ ಬಸವೇಶ್ವರ ರೈಸ್ ಇಂಡಸ್ಟ್ರೀಸ್
ಯಕ್ಕನಹಳ್ಳಿ, ಮಲೇಬೆನ್ನೂರು.

**ಶ್ರೀಮತಿ ಶಶಿಕಲಾ ಟಿ.ಎಸ್. ಅಶೋಕ್**
ಸದಸ್ಯರು, ಗ್ರಾ.ಪಂ. ಯಕ್ಕನಹಳ್ಳಿ.





**ಶ್ರೀ ಎಸ್.ಟಿ. ಸೋಮಶೇಖರ್**
ಮಾನ್ಯ ಸಹಕಾರ ಸಚಿವರು ಮತ್ತು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರು, ಕರ್ನಾಟಕ ಸರ್ಕಾರ.



**ಶ್ರೀ ಬಿ.ಎ. ಬಸವರಾಜ್**
ಮಾನ್ಯ ನಗರಾಭಿವೃದ್ಧಿ ಸಚಿವರು, ಕರ್ನಾಟಕ ಸರ್ಕಾರ ಹಾಗೂ ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವರು

## ಸರ್ವರಿಗೂ ಬೆಳಕಿನ ಹಬ್ಬ ದೀಪಾವಳಿಯ ಹಾರ್ದಿಕ ಶುಭಾಶಯಗಳು

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ನಿ., ಬೆಂಗಳೂರು.
ದಾವಣಗೆರೆ ಜಿಲ್ಲಾ ಸಹಕಾರ ಪಟ್ಟಣ ಬ್ಯಾಂಕುಗಳ ಒಕ್ಕೂಟ, ದಾವಣಗೆರೆ
ದಾವಣಗೆರೆ ಜಿಲ್ಲಾ ಸಹಕಾರ ಯೂನಿಯನ್ ನಿ., ದಾವಣಗೆರೆ.
ದಾವಣಗೆರೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ., ದಾವಣಗೆರೆ.
ಶಿವಮೊಗ್ಗ, ದಾವಣಗೆರೆ, ಚಿತ್ರದುರ್ಗ ಜಿಲ್ಲೆಗಳ ಸಹಕಾರ ಹಾಲು ಒಕ್ಕೂಟ ನಿಯಮಿತ, ಶಿವಮೊಗ್ಗ
ಸಹಕಾರ ಇಲಾಖೆ ಮತ್ತು ದಾವಣಗೆರೆ ಜಿಲ್ಲೆಯ ಎಲ್ಲಾ ರೀತಿಯ ಸಹಕಾರ ಸಂಘಗಳು ಇವರುಗಳ ಸಂಯುಕ್ತಾಶ್ರಯದಲ್ಲಿ

# 67ನೇ ಅಖಿಲ ಭಾರತ ಸಹಕಾರ ಸಪ್ತಾಹ - 2020

"ಅಂತರ್ಜಾಲ ಸಂಪರ್ಕದ ಮೂಲಕ ಸಹಕಾರ ಶಿಕ್ಷಣ – ತರಬೇತಿಯ ಪುನರ್‌ಮನನ ಕಾರ್ಯಕ್ರಮ"

ದಿನಾಂಕ : 16-11-2020ನೇ ಸೋಮವಾರ, ಸಮಯ : ಬೆಳಿಗ್ಗೆ 11 ಗಂಟೆಗೆ, ಸ್ಥಳ : ಬಾಪೂಜಿ ಬ್ಯಾಂಕ್ ಸಮುದಾಯ ಭವನ, ದಾವಣಗೆರೆ.




## ಸರ್ವರಿಗೂ ಆದರದ ಸುಸ್ವಾಗತ

### ದಾವಣಗೆರೆ ಜಿಲ್ಲಾ ಸಹಕಾರ ಯೂನಿಯನ್ ನಿ.,

ಜನತಾ ಬಜಾರ್ ಕಾಂಪ್ಲೆಕ್ಸ್, ದಾವಣಗೆರೆ - 577 002.

**ಸಂಘದ ಆಡಳಿತ ಮಂಡಳಿ**



ಎನ್.ಎ. ಮುರುಗೇಶ್ – ಅಧ್ಯಕ್ಷರು
ಬಿ.ವಿ. ಚಂದ್ರಶೇಖರ್ – ನಿರ್ದೇಶಕರು
ಡಾ. ಜೆ.ಆರ್. ಷಣ್ಮುಖಪ್ಪ – ನಿರ್ದೇಶಕರು
ಸಿರಿಗೆರೆ ರಾಜಣ್ಣ – ನಿರ್ದೇಶಕರು
ಎಸ್.ಬಿ. ಶಿವಕುಮಾರ್ – ನಿರ್ದೇಶಕರು
ಹೆಚ್. ಬಸವರಾಜಪ್ಪ – ಉಪಾಧ್ಯಕ್ಷರು
ಗಿಡ್ಡಳ್ಳಿ ನಾಗರಾಜ್ – ನಿರ್ದೇಶಕರು
ಟಿ. ರಾಜಣ್ಣ – ನಿರ್ದೇಶಕರು
ಆರ್.ಎಂ. ಮಾಲತೇಶ್ – ನಿರ್ದೇಶಕರು
ಡಿ.ಎಂ. ಮುರುಗೇಂದ್ರಯ್ಯ – ನಿರ್ದೇಶಕರು
ಬಿ. ಶೇಖರಪ್ಪ – ನಿರ್ದೇಶಕರು
ಅನ್ನಪೂರ್ಣ – ನಿರ್ದೇಶಕರು
ಡಿ. ಶಿವಗಂಗಮ್ಮ – ನಿರ್ದೇಶಕರು
ಜಯಪ್ರಕಾಶ್ ಬಿ. – ಪದನಿಮಿತ್ತ ನಿರ್ದೇಶಕರು ಹಾಗೂ ಸಹಕಾರ ಸಂಘಗಳ ಉಪನಿಬಂಧಕರು

### ದಾವಣಗೆರೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ.,

# 311, ಶ್ರೀ ಡಿ. ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್, ದಾವಣಗೆರೆ - 577 006.

**ಬ್ಯಾಂಕಿನ ಆಡಳಿತ ಮಂಡಳಿ**



ಡಾ. ಜೆ.ಆರ್. ಷಣ್ಮುಖಪ್ಪ – ಅಧ್ಯಕ್ಷರು
ಬಿ.ವಿ. ಚಂದ್ರಶೇಖರ್ – ನಿರ್ದೇಶಕರು
ಜಿ.ಎಸ್. ವೇಣುಗೋಪಾಲರೆಡ್ಡಿ – ನಿರ್ದೇಶಕರು
ಕೆ.ಹೆಚ್. ಷಣ್ಮುಖಪ್ಪ – ನಿರ್ದೇಶಕರು
ಜಗದೀಶಪ್ಪ ಬಣಕಾರ – ನಿರ್ದೇಶಕರು
ಆರ್.ಜಿ. ಶ್ರೀನಿವಾಸಮೂರ್ತಿ – ನಿರ್ದೇಶಕರು
ಬಿ. ಶೇಖರಪ್ಪ – ನಿರ್ದೇಶಕರು
ಜಿ.ಎನ್. ಸ್ವಾಮಿ – ನಿರ್ದೇಶಕರು
ಬಿ.ಹಾಲೇಶಪ್ಪ – ನಿರ್ದೇಶಕರು
ಶಿವಮೂರ್ತಿ – ಅಪೆಕ್ಸ್ ಬ್ಯಾಂಕ್ ಪ್ರತಿನಿಧಿ
ಜಯಪ್ರಕಾಶ್ ಬಿ. – ಸಹಕಾರ ಸಂಘಗಳ ಉಪನಿಬಂಧಕರು

**ಅಪಾರ್ಟ್‌ಮೆಂಟ್‌ನಲ್ಲಿ**
ಮನೆಗಳು ಮಾರಾಟಕ್ಕಿವೆ. 2 ಬೆಡ್‌ರೂಂ ಮನೆಗಳು 100 ಅಡಿ ರೋಡಿಗೆ ಹತ್ತಿರ ಜಯನಗರದಲ್ಲಿ Rs 28 ಲಕ್ಷದಿಂದ 44 ಲಕ್ಷದವರೆಗೆ.
ಐನಹಳ್ಳಿ ಚನ್ನಬಸಪ್ಪ, ಏಜೆಂಟ್
99166 12110
93410 14130

**ಶ್ರೇಯಸ್ ಉದರ, ಲಿವರ್, ಕರುಳು ರೋಗಗಳ ಚಿಕಿತ್ಸಾ ಕೇಂದ್ರ**
**ಡಾ. ಇ.ಆರ್. ಸಿದ್ದೇಶಿ**
M.D. (MED), D.M. (Gastro), F.A.C.G. (USA), P.G.C.C. Diab. Care (Aust)
ಉದರ, ಲಿವರ್, ಕರಳು, ಪ್ಯಾನ್‌ಕ್ರಿಯಾಸ್, ಎಂಡೋಸ್ಕೋಪಿ, ಸಕ್ಕರೆ ಕಾಯಿಲೆ ತಜ್ಞರು
8th Main, 8th Cross, P.J. Extension, Davangere.
08192-237325, 94837 23166

**ಮನೆ ಬಾಡಿಗೆಗೆ ಇದೆ**
ಮೊದಲನೇ ಮಹಡಿಯಲ್ಲಿ 2 ಬೆಡ್‌ರೂಂ, ಬೋರ್‌ವೆಲ್ ಹಾಗೂ ಕಾರ್ಪೊರೇಷನ್ ನೀರು ಇರುವ ಮನೆ 4ನೇ ಮೇನ್, 7ನೇ ಕ್ರಾಸ್ ವಿದ್ಯಾನಗರ ಪಾರ್ಕ್ ಪಕ್ಕ ಇರುವ ಮನೆ ಖಾಲಿ ಇದೆ.
95917 47333
97416 78794

**ಸೈಟುಗಳು ಮಾರಾಟಕ್ಕಿವೆ**
ದೂಡಾ ಅಪ್ರೂಡ್ ಸೈಟ್‌ಗಳು ಮಾರಾಟಕ್ಕಿವೆ.
RS. 899 Per Sq ft
ದೀಪಾವಳಿ ವಿಶೇಷ ರಿಯಾಯಿತಿಯಲ್ಲಿ
93431 10009
98441 24217
86603 11021

**ಸೈಟು ಮಾರಾಟಕ್ಕಿದೆ**
ಎಲ್ಲಾ ರೀತಿ ಅಭಿವೃದ್ಧಿ ಹೊಂದಿರುವ ಹಾಗೂ ಎದುರಿಗೆ ಪಾರ್ಕ್ ಇರುವ 30x50 ಅಳತೆಯ ಸೈಟು ದಾವಣಗೆರೆಯ ರಂಗನಾಥ ಬಡಾವಣೆ 18ನೇ ಕ್ರಾಸ್, ವಿದ್ಯಾನಗರದಲ್ಲಿ ಮಾರಾಟಕ್ಕಿದೆ.
ಸಪ್ತಗಿರಿ ಸಿಮೆಂಟ್ ಗೋಡೌನ್ ಹತ್ತಿರ.
ಚದರಡಿಗೆ 3600 ರೂ. ಫಿಕ್ಸ್ ರೇಟ್
ಸಂಪರ್ಕಿಸಿ : 99167-64211
ಮಧ್ಯವರ್ತಿಗಳಿಗೆ ಅವಕಾಶವಿಲ್ಲ.

**ಮನೆಗಳು ಮಾರಾಟಕ್ಕಿವೆ**
ಬಂಟ್ಸ್ ಸಮುದಾಯ ಭವನದ ಹತ್ತಿರ ಕುಂದುವಾಡ ರಸ್ತೆಯಲ್ಲಿ 30x40, ಮಹಾಲಕ್ಷ್ಮಿ ಬಡಾವಣೆಯಲ್ಲಿ 30x40 ಮನೆಗಳು ಮಾರಾಟಕ್ಕಿವೆ.
99866-17483, 78996-81386

**ಸೈಟ್ ಮತ್ತು ಅಪಾರ್ಟ್‌ಮೆಂಟ್ ಬಾಡಿಗೆಗೆ, ಮಾರಾಟಕ್ಕೆ ಇದೆ**
ಎಸ್.ಎಸ್. ಲೇ ಔಟ್, ಮಹಾಲಕ್ಷ್ಮಿ ಲೇ ಔಟ್, ಸಿದ್ದವೀರಪ್ಪ ಬಡಾವಣೆ, KHB ಕಾಲೋನಿ, ಜೆ.ಹೆಚ್. ಪಟೇಲ್ ನಗರ, ಬನಶಂಕರಿ ಬಡಾವಣೆ 30×50, 30×48, 20×30, 50×50, 50×70
94481-85946

**ಮನೆ ಬಾಡಿಗೆಗೆ ಇದೆ**
2BHK, 2ನೇ ಮಹಡಿ (Floor) ಪೂರ್ವ ಬಾಗಿಲು, ವಾಸ್ತು ಪ್ರಕಾರ, ಇರುವ ಮನೆ ವಿದ್ಯಾ ನಂದನ ಸ್ಕೂಲ್ ಹತ್ತಿರ, ಸರಸ್ವತಿ ನಗರದಲ್ಲಿ ಇದೆ.
97405 04217
74117 79793

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಮನೆ ಕಟ್ಟಿಕೊಡಲಾಗುವುದು**
SSS ಎಂಟರ್ ಪ್ರೈಸಸ್ ಇವರಿಂದ ಭಾರೀ ಕಡಿಮೆ ದರದಲ್ಲಿ ಮನೆ ಕಟ್ಟಿಕೊಡಲಾಗುವುದು.
ಆವರಗೆರೆ ಹುಂಡೈ ಶೋ ರೂಂ ಪಕ್ಕ,
20×30 ಸೈಟ್ ಮತ್ತು ಮನೆ ಕೇವಲ 21 ಲಕ್ಷಕ್ಕೆ ಕಟ್ಟಿಕೊಡಲಾಗುವುದು. ಸಂಪರ್ಕಿಸಿ : ಪಠಾಣ್,
8139988555, 96323 00009
ಬ್ಯಾಂಕ್ ಸಾಲ ಸೌಲಭ್ಯ ದೊರೆಯುತ್ತದೆ.

**ಸೈಟುಗಳು ಮಾರಾಟಕ್ಕಿವೆ**
ಶಿವ ಪಾರ್ವತಿ ಬಡಾವಣೆಯಲ್ಲಿ 30x40, 30x50, 40x40, 40x60. ಎಸ್.ಎಸ್. ಎನ್ ಕ್ಲೇವ್ ನಲ್ಲಿ 40x30, 30x50, 30x45. ಎಸ್.ಎಸ್. ಬಡಾವಣೆಯಲ್ಲಿ 40x60. ಆಂಜನೇಯ ಬಡಾವಣೆಯಲ್ಲಿ 35x50. ಆವರಗೆರೆ ಉತ್ತಮಚಂದ್ ಬಡಾವಣೆಯಲ್ಲಿ 30x60. ಬಸವೇಶ್ವರ ಲೇಔಟ್ ನಲ್ಲಿ 40x60 ಅಳತೆಯ ಸೈಟುಗಳು ಮಾರಾಟಕ್ಕಿವೆ.
78996-81386, 99866-17483

**PG ಬಿಲ್ಡಿಂಗ್ ಬಾಡಿಗೆಗೆ ಇದೆ**
16 ಸುಸಜ್ಜಿತ ಅಟ್ಯಾಚ್ಡ್ ಬಾತ್‌ರೂಂ ಇರುವ ಹಾಗೂ 1000sq feet ಡೈನಿಂಗ್ ಹಾಲ್ ಹಾಗೂ ನಲ್ಲಿ ಮತ್ತು ಬೋರ್ ನೀರು ಸೌಕರ್ಯ ಇರುವ BIET ಕಾಲೇಜ್ ರೋಡ್ , ದವನ್ ಕಾಲೇಜ್ ಹತ್ತಿರ, ದಾವಣಗೆರೆ.
94484 42694
99725 35329

**ಬೇಕಾಗಿದ್ದಾರೆ**
ಅಂಗಡಿಯಲ್ಲಿ ಕೆಲಸ ಮಾಡಲು ಆಸಕ್ತಿಯುಳ್ಳ ಹುಡುಗರು ಬೇಕಾಗಿದ್ದಾರೆ.
83103-14540

**ಅಭಿಷೇಕ್ ಟಿಂಬರ್ ಅಂಡ್ ಸಾಮಿಲ್**
RMC ಲಿಂಕ್ ರಸ್ತೆ, ವಿನಾಯಕ ಟಾಕೀಸ್ ಹತ್ತಿರ, ಬಂಬೂಬಜಾರ್, ದಾವಣಗೆರೆ.
ಅಕೌಂಟೆಂಟ್ ಕೆಲಸಕ್ಕೆ ವಿವಾಹಿತ ಮಹಿಳೆ, ಅಕೌಂಟ್ಸ್ ಕೆಲಸದಲ್ಲಿ ಅನುಭವ ಇರುವವರು ಬೇಕಾಗಿದ್ದಾರೆ. ಕೂಡಲೇ ಸಂಪರ್ಕಿಸಿ :
+91 63 6444 6777

**ಸೈಟು ಮಾರಾಟಕ್ಕಿದೆ**
ಕರ್ನಾಟಕ ಗೃಹ ಮಂಡಳಿಯ ತುಂಗಭದ್ರಾ ಬಡಾವಣೆಯಲ್ಲಿ 30x50 ಸೈಟ್ ಮಾರಾಟಕ್ಕಿದೆ. ಸಂಪರ್ಕಿಸಿ :
98453 52449

**ಮಳಿಗೆ ಖಾಲಿ ಇದೆ**
ನರಸರಾಜ ರಸ್ತೆಯಲ್ಲಿ ಕಾರ್ನರ್ ಮಳಿಗೆ ಖಾಲಿ ಇದೆ. ಆಸಕ್ತರು ಸಂಪರ್ಕಿಸಿ:
70199 88456

**ಬೇಕಾಗಿದ್ದಾರೆ**
ನೀರಿನ ಫ್ಯಾಕ್ಟರಿಯಲ್ಲಿ ರಾತ್ರಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ಸಂಪರ್ಕಿಸಿ:
88619 45934

**HOME TUTION**
ನಾವು ಎಲ್ಲಾ ತರಹದ CBSE ಮತ್ತು PUC ವಿದ್ಯಾರ್ಥಿಗಳಿಗೆ ಪ್ರತ್ಯೇಕವಾಗಿ ಮನೆಗೇ ಬಂದು ಟ್ಯೂಷನ್ ಮಾಡಿಕೊಡಲಾಗುವುದು.
Santosh kumar P.
M.Sc Mathematics (4 years Experience)
72044 96457
80950 01504


# ಕೊಂಡಜ್ಜಿಯಲ್ಲಿ ಸ್ಕೌಟ್ಸ್ ಕೇಂದ್ರದಲ್ಲಿ ಮಕ್ಕಳ ದಿನಾಚರಣೆ



ದಾವಣಗೆರೆ, ನ.14- 38ನೇ ಕೊಂಡಜ್ಜಿ ಬಸಪ್ಪನವರ ಪುಣ್ಯಸ್ಮರಣೆ ಮತ್ತು ಮಕ್ಕಳ ದಿನಾಚರಣೆ ಹಾಗೂ ಸರ್ವಧರ್ಮ ಪ್ರಾರ್ಥನೆಯನ್ನು ಕೊಂಡಜ್ಜಿಯಲ್ಲಿರುವ ಕೊಂಡಜ್ಜಿ ಬಸಪ್ಪ ರಾಜ್ಯ ಸ್ಕೌಟ್ಸ್-ಗೈಡ್ಸ್ ತರಬೇತಿ ಕೇಂದ್ರದಲ್ಲಿ ಇಂದು ನಡೆಯಿತು.

ಅಧ್ಯಕ್ಷತೆಯನ್ನು ಮಾಜಿ ಸಚಿವ ಪಿ.ಜಿ.ಆರ್ ಸಿಂಧ್ಯಾ, ಅತಿಥಿಗಳಾಗಿ ಬಿಬಿಎಂಪಿ ಸಂಯೋಜಕ ಎಂ.ಚೆಲ್ಲಯ್ಯ, ಆಜೀವ ಸದಸ್ಯರಾದ ಡಾ. ಗುರುಮೂರ್ತಿ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕದ ಉಪಾಧ್ಯಕ್ಷ ಕೊಂಡಜ್ಜಿ ಬಿ. ಷಣ್ಮುಖಪ್ಪ, ಹರಿಹರ ತಹಶೀಲ್ದಾರ್ ರಾಮಚಂದ್ರಪ್ಪ ಮತ್ತು ವಿಧಾನ ಪರಿಷತ್ ಸದಸ್ಯರಾದ ಮೋಹನ್ ಕುಮಾರ್ ಕೊಂಡಜ್ಜಿ ಮತ್ತು ಅಂತರರಾಷ್ಟ್ರೀಯ ಉಪ ಮುಖ್ಯ ಆಯುಕ್ತ ಮಧುಸೂದನ್, ಜಿಲ್ಲಾ ಸ್ಕೌಟ್ ಆಯುಕ್ತ ಎ.ಪಿ ಷಡಕ್ಷರಪ್ಪ ಮತ್ತಿತರರು ಉಪಸ್ಥಿತರಿದ್ದರು.

## ದೀಪಾವಳಿ

ದೀಪಾವಳಿ ಬೆಳಕಿನ ಹಬ್ಬ,
ಕತ್ತಲೆಯ ಓಡಿಸುವ ಹಬ್ಬ,
ಕಿರುಹಣತೆ ಬೆಳಕಿನಲಿ
ಭರವಸೆಯ ಬಿತ್ತುವ ಹಬ್ಬ,
ಉರಿವ ಪ್ರಣತಿಗಳು
ಕಾರ್ಗತ್ತಲೆಯ ಓಡಿಸಿ
ಸುಂದರ ಮಂದ ಬೆಳಕಿನ
ಸೊಬಗನು ಸವಿಯುವ ಹಬ್ಬ,
ಮನೆ ಮಂದಿಗೆಲ್ಲಾ
ಮುದ ನೀಡುವ ಹಬ್ಬ,
ಹೊಸ ಬಟ್ಟೆಯನ್ನುಟ್ಟ
ಪುಟಾಣಿ ಮಕ್ಕಳಿಗೆಲ್ಲಾ
ಸಂತಸ ತರುವ ಹಬ್ಬ,
ನಾಡಿನ ಜನತೆಗೆಲ್ಲಾ
ಸಡಗರದ ಹಬ್ಬ,
ಎಲ್ಲರ ಮನೆ - ಮನಗಳಿಗೆ
ಖುಷಿ ಕೊಡುವ ಹಬ್ಬ,
ಅಜ್ಞಾನದ ಅಂಧಕಾರ ತೊರೆದು
ಜ್ಞಾನದ ದೀಪ ಬೆಳಗಿಸುವ ಹಬ್ಬ,
ಸ್ವಚ್ಛಂದವಾಗಿ ಸಂತಸದಿ
ಆಚರಿಸೋಣ ಬೆಳಕಿನ ಹಬ್ಬ.
ಪಟಾಕಿಗಳ ಸಿಡಿಸದೆ
ವಾಯು ಮಾಲಿನ್ಯ ತಡೆದು,
ಶ್ವಾಸಕೋಶ ರಕ್ಷಣೆಯ
ಜೊತೆಗೆ ನಾವೆಲ್ಲರೂ
ಪರಿಸರ ಸಂರಕ್ಷಿಸುವ ಹಬ್ಬ,
ಮನೆಯ ಅಂಗಳದಿ ಸಿಡಿವ
ಪಟಾಕಿಗಳಿಂದ ಸಂಭವಿಸುವ
ದುರಂತಗಳನು ತಡೆವ ಹಬ್ಬ,
ಎಳೆಯ ಮುದ್ದು ಮಕ್ಕಳ
ಸುಂದರ ಕಣ್ಣುಗಳನು ರಕ್ಷಿಸೋಣ.
ಕೊರೊನಾ ಅಟ್ಟಹಾಸದ
ಈ ಸಮಯ ಮಾಸ್ಕ್ ಧರಿಸಿ
ಸಾಮಾಜಿಕ ಅಂತರ
ಕಾಪಾಡುವ ಕಡೆ ಗಮನಹರಿಸಿ
ಸಡಗರದ ದೀಪಾವಳಿಯ
ಆಚರಿಸೋಣ ಬನ್ನಿ......

- ಜಿ.ಎ.ಜಗದೀಶ್,
ಪೊಲೀಸ್ ಅಧೀಕ್ಷಕರು (ನಿ)
ಬೆಂಗಳೂರು.

# ಐಸಿಎಆರ್ ಕೃಷಿ ಕೇಂದ್ರದಲ್ಲಿ ಕಡಲೆ ಬೆಳೆ ತರಬೇತಿ



ದಾವಣಗೆರೆ, ನ.14- ಐಸಿಎಆರ್ ತರಳಬಾಳು ಕೃಷಿ ವಿಜ್ಞಾನ ಕೇಂದ್ರದಲ್ಲಿ ರಾಷ್ಟ್ರೀಯ ಆಹಾರ ಭದ್ರತಾ ಯೋಜನೆ ಅಡಿಯಲ್ಲಿ ಗುಚ್ಛ ಗ್ರಾಮ ಮುಂಚೂಣಿ ಪ್ರಾತ್ಯಕ್ಷಿಕೆಯ ಅಂಗವಾಗಿ ಒಳ ಆವರಣದ ಕಡಲೆ ಬೆಳೆ ತರಬೇತಿಯನ್ನು ಹಮ್ಮಿಕೊಳ್ಳಲಾಗಿತ್ತು.

ಕೇಂದ್ರದ ಮುಖ್ಯಸ್ಥ ಡಾ. ಟಿ.ಎನ್. ದೇವರಾಜ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿ, ರೈತರು, ವಿಜ್ಞಾನಿಗಳು ಹೇಳುವ ನವೀನ ತಾಂತ್ರಿಕತೆಗಳನ್ನು ಬಳಸಿ, ಅಧಿಕ ಇಳುವರಿಯನ್ನು ಪಡೆಯಿರಿ ಎಂದರು.

ಕೇಂದ್ರದ ಬೇಸಾಯ ತಜ್ಞ ಮಲ್ಲಿಕಾರ್ಜುನ್ ಅವರು ಮಾತನಾಡಿ, ಕಡಲೆ ಬೆಳೆಯಲ್ಲಿ ಅಧಿಕ ಇಳುವರಿ ಕೊಡುವ ತಳಿ ಯಾದ ಜಾಕಿ 9218 ಬೆಳೆಯುವುದು ಸೂಕ್ತ ಹಾಗೂ ಜೈವಿಕ ಗೊಬ್ಬರಗಳಾದ ರೈಜೋಬಿಯಂ ಹಾಗೂ ಪಿಎಸ್‌ಬಿ 500 ಗ್ರಾಂ ಪ್ರತಿ ಎಕರೆ ಬೀಜಕ್ಕೆ ಬೀಜೋಪಚಾರ ಮಾಡಿ ಹಾಗೂ ಇದರ ಜೊತೆಗೆ ಟ್ರೈಕೋಡರ್ಮಾ ಶಿಲೀಂಧ್ರ ನಾಶಕವನ್ನು 4 ಗ್ರಾಂ ಪ್ರತಿ ಕೆಜಿ ಬೀಜಕ್ಕೆ ಬೀಜೋಪಚಾರ ಮಾಡಿ, ಬಿತ್ತನೆ ಮಾಡುವುದು ಸೂಕ್ತ ಎಂದರು.

ಕಾರ್ಯಕ್ರಮದಲ್ಲಿ ಕೇಂದ್ರದ ತೋಟಗಾರಿಕೆ ತಜ್ಞ ಎಂ.ಜಿ. ಬಸವನಗೌಡ ಹಾಗೂ ನ್ಯಾಮತಿ ತಾಲ್ಲೂಕಿನ ರಾಮೇಶ್ವರ ಗ್ರಾಮದ ರೈತರು ಭಾಗವಹಿಸಿದ್ದರು.

## ತಾಲ್ಲೂಕು ಕಸಾಪದಿಂದ ಇಂದು ನುಡಿ ಹಬ್ಬ

ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ವತಿ ಯಿಂದ ಅಂತರ್ಜಾಲದ ಮೂಲಕ ನಡೆಯುತ್ತಿರುವ ಕನ್ನಡ ನುಡಿ ಹಬ್ಬದಲ್ಲಿ ಇಂದು ಸಂಜೆ 6 ರಿಂದ 7ರವರೆಗೆ 'ಕೃಷಿಯಲ್ಲಿ ಉದ್ಯಮ ಶೀಲತೆ ಹಾಗೂ ಆದಾಯ ಅಭಿವೃದ್ಧಿ' ವಿಷಯ ಕುರಿತು ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರೂ ಆಗಿರುವ ಹಿರಿಯ ವಿಜ್ಞಾನಿ ಡಾ. ಟಿ.ಎನ್. ದೇವರಾಜ್ ತಮ್ಮ ಅನುಭವವನ್ನು ಹಂಚಿಕೊಳ್ಳಲಿದ್ದಾರೆ.

ಆಸಕ್ತರು youtube channel links : Davanagere Taluk ka. sa.pa kannada Nudi_habba2020, web site : http://www.youtube.com/channel/ucjWzFm4YFnhAxce4UwjPsYg ಮುಖಾಂತರ ಕಾರ್ಯಕ್ರಮ ವೀಕ್ಷಿಸಬಹುದು.

## ಕರೂರು ಕೆಇಬಿ ಬಳಿ ವಲಸಿಗರ ಕ್ಯಾಂಪಿಗೆ ಬಿಇಒ ತಂಡ ಭೇಟಿ

ದಾವಣಗೆರೆ, ನ.14- ಉತ್ತರವಲಯ ವಿಭಾಗದ ಯರಗುಂಟೆ ಕ್ಲಸ್ಟರ್‌ಗೆ ಸೇರಲ್ಪಡುವ ಕರೂರಿನ ಕೆಇಬಿ ಬಳಿ ಇರುವ ಬಾಗಲಕೋಟೆ, ಜಮಖಂಡಿ ಕಡೆಯಿಂದ ಬಂದ ವಲಸಿಗರ ಕ್ಯಾಂಪಿಗೆ ಉತ್ತರ ವಲಯ ಕ್ಷೇತ್ರ ಶಿಕ್ಷಣಾಧಿಕಾರಿ ಕೊಟ್ರೇಶ್, ಬಿಆರ್‌ಪಿ ನಾಗರಾಜ್, ಸಿಆರ್‌ಪಿ ಸೈಯದ್ ಸೈಫುಲ್ಲಾ ಹಾಗೂ ಯರಗುಂಟೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮುಖ್ಯಶಿಕ್ಷಕ ಹಾಗೂ ಶಿಕ್ಷಕರ ತಂಡ ಭೇಟಿ ನೀಡಿತ್ತು.

ಕ್ಯಾಂಪಿನಲ್ಲಿ ಶಾಲೆಗೆ ಸೇರದ ಮಕ್ಕಳನ್ನು ಗುರ್ತಿಸಿ, ಒಂದನೇ ತರಗತಿಗೆ 7 ಮಕ್ಕಳನ್ನು ದಾಖಲು ಮಾಡಿಕೊಳ್ಳಲಾಯಿತು. ಹಾಗೂ 9 ಮತ್ತು 10 ನೇ ತರಗತಿ ಮಕ್ಕಳಿಗೆ ಕೆಲವು ಸಲಹೆ, ಸೂಚನೆ, ಮಾಹಿತಿಗಳನ್ನು ನೀಡಲಾಯಿತು. ಸರ್ಕಾರದ ಸವಲತ್ತುಗಳ ಕುರಿತು ಮಾಹಿತಿ ನೀಡಲಾಯಿತು. ಕಳೆದ ಅಭಿಯಾನದಲ್ಲಿ ಶಾಲೆಗೆ ದಾಖಲಾಗಿರುವ 13 ಮಕ್ಕಳೂ ಸೇರಿದಂತೆ, ನೂರಕ್ಕೂ ಹೆಚ್ಚು ಜನರು ವಾಸವಿದ್ದು, ಅಲ್ಲಿನ ಕುಂದು ಕೊರತೆಯನ್ನು ಕ್ಯಾಂಪಿನ ಹಿರಿಯರು ತಿಳಿಸಿದರು.

## ಪದವಾಣಿ-07

ರಚನೆ : ನಾಗರಾಜು ಗೊಡಬನಹಾಳ್



**ಎಡದಿಂದ ಬಲಕ್ಕೆ :**
1) ರಾಮನ ಅನುಗ್ರಹಕ್ಕೆ ಪಾತ್ರಳಾದ ಬೇಡ ಸ್ತ್ರೀ 3
3) ಆಕಾಶ ವಾಹನದಲ್ಲಿ ಪ್ರಯಾಣ 5
6) ತುಂತುರು ಮಳೆ 3
7) ಕೊನೆಗೆ ದಾರಿ ತೋರಿಸುವ ಪಟ್ಟಣ 3
9) ದುರ್ಗೆಯನ್ನು ಒಲಿಸಿಕೊಂಡ ಸುಪ್ರಸಿದ್ಧ ಕವಿ ತಿರುಗಿದ್ದಾನೆ 4
10) ದೂರ ದೇಶಗಳಿಗೆ ಸಂಚರಿಸುವ ಪ್ರಯಾಣಿಕ 3
12) ಮನೆ ಮುಂದಿನ ಕಟ್ಟೆ 3
13) ಪಾಂಡುರಾಜನ ತಮ್ಮ ಅಸ್ತವ್ಯಸ್ತನಾಗಿದ್ದಾನೆ 3
15) ಅನ್ನ, ಮೊಸರು, ಹುಳಿ ಸೇರಿದ ಮಿಶ್ರಣ 3
16) ಮಾತಿನ ಜೋಡಣೆ 4
18) ಮೂರಕ್ಷರದ ತಾಳ್ಮೆ ತಿರುಗಿದೆ 3
20) ನೀರಿನಲ್ಲಿ ಹುಟ್ಟಿದ ಕಮಲ ಸ್ತ್ರೀನಾಮವಾಗಿದೆ 3
21) ಬೆಟ್ಟದ ಮೇಲೆ ಸಿಗುವ ಒಂದು ಬಗೆಯ ವನಸ್ಪತಿ 5
22) ಹಾವಿನ ಶತ್ರು ಎಂದು ನಂಬಲಾಗಿರುವ ಪ್ರಾಣಿ 3

**ಮೇಲಿನಿಂದ ಕೆಳಕ್ಕೆ :**
1) ದುರ್ಯೋಧನನ ಸೋದರ ಮಾವ 3
2) ಮೂರಕ್ಷರದ ಕೂಲಿ ತಲೆಕೆಳಗಾಗಿದೆ 3
3) ಸೂರ್ಯ ಮೇಲೇರಿದ್ದಾನೆ 2
4) ಕೊಡುವ ಉದಾರಿ ಚೆಲ್ಲಾಪಿಲ್ಲಿಯಾಗಿದ್ದಾನೆ 3
5) ವಿಷ್ಣುವಿನಿಂದ ಹತನಾದ ಒಬ್ಬ ರಾಕ್ಷಸ 5
8) ಪುಸ್ತಕ ಪ್ರಕಟಣೆಗೆ ಪ್ರಸಿದ್ಧವಾದ ಊರು 3
9) ಮೊಳಕೆಯೊಡೆದ ಎಳೆಯ ಗಿಡ 2
11) ಬಂಡಿಯನ್ನು ಹೊಡೆಯುವ ಸವಾರ ಕೊನೆಗೆ ದೀರ್ಘವಾಗಿದ್ದಾನೆ 3
12) ಜನಮನ್ನಣೆ ಗಳಿಸಿದ ಜನಪ್ರಿಯ ವ್ಯಕ್ತಿ 5
14) ತಾಳಲಾರದ ಅಗಲಿಕೆ ತಿಣಕಿದರೆ ಹೋದೀತೆ? 3
15) ಹಣೆಗೆ ಧರಿಸುವ ದುಂಡನೆಯ ತಿಲಕ 2
17) ರಾಗಬದ್ಧವಾಗಿ ಹಾಡಬಲ್ಲವ 3
18) ಬೆಳಗಿನ ಹೊತ್ತು ಮೇಲೇರಿದೆ 3
19) ಸಂಸಾರದ ಮೋಹವನ್ನು ತೊರೆದ ವಿರಕ್ತ 3
20) ಹತೋಟಿಯೂ ಹೌದು, ಸಂಖ್ಯೆಯೂ ಹೌದು 2

(ಉತ್ತರಗಳು ಮುಂದಿನ ವಾರಕ್ಕೆ)

### ಪದವಾಣಿ - 06ರ ಉತ್ತರಗಳು :

ಎಡದಿಂದ ಬಲಕ್ಕೆ : 1) ಆದಿತ್ಯವಾರ 4) ಸಮರ 6) ರಕ್ಷಾ 7) ಕಸಾಪ 9) ರಜನಿ 11) ಛತ್ರ 12) ವಿರಸಾ 14) ಸಂಪುಟ 16) ಳಿಪಾ (ಪಾಳಿ) 17) ನವಣೆ 19) ಪಾನಕ 21) ನಾಕಾ 23) ಗಣಕ 24) ಖಾಸಗಿಶಾಲೆ.

ಮೇಲಿನಿಂದ ಕೆಳಕ್ಕೆ : 1) ಆಸ್ತಿಕ 2) ವಾರ 3) ರಕ್ಷಾಪತ್ರ 5) ಮನುಜ 8) ಸಾಕ್ಷರ 9) ರಸಾಸಂ (ಸಂಸಾರ) 10) ನಿಟಕ 12) ವಿಮಾನ 13) ಸಾಗಣೆ 15) ಪುದೀನ 16) ಖಾನಾವಳಿ 18) ವರುಣ 20) ಕಪಿಲೆ 22) ಕಾಸ.

# ಆಪ್ತಮಿತ್ರನ ಅಗಲಿಕೆ



ನಾವಿಬ್ಬರೂ ಏಕವಚನದ ಗೆಳೆಯರು. ನಮ್ಮ ಗೆಳೆತನಕ್ಕೆ ಏನಿಲ್ಲವೆಂದರೂ ಅಜಮಾಸು ಮೂರು ದಶಕಗಳಿಗೂ ಮಿಗಿಲಾದ ಆಯಸ್ಸು.

ಬೆಳಗೆರೆಯ ಸಮಗ್ರ ಸಾಹಿತ್ಯ ಕುರಿತು ದಾವಣಗೆರೆಯಲ್ಲಿ ನಾನು ವಿಚಾರ ಸಂಕಿರಣ ಏರ್ಪಡಿಸಿದಾಗ ರವಿ ಜತೆ ಸೀತಾನದಿ ಸುರೇಂದ್ರ, ಇನ್ನೊಂದಿಬ್ಬರು ಗೆಳೆಯರು ಬಂದಿದ್ದರು. ಗೆಳೆಯರಾದ ಅಗಸನಕಟ್ಟೆ, ರಾಘವೇಂದ್ರ ಪಾಟೀಲ, ಬಿ. ಎಲ್. ವೇಣು ಬೆಳಗೆರೆಯ ಕೃತಿಗಳ ಕುರಿತು ಪ್ರಬಂಧ ಮಂಡಿಸಿದರು. ಆಗ ಬೆಳಗೆರೆ ಪತ್ರಿಕೆ ಬರವಣಿಗೆಯ ಉಕ್ಕಿ ಹರಿಯುವ ಹರೆಯ ಮತ್ತು ಹವಾ. ಕಿಕ್ಕಿರಿದ ಜನಸಂದಣಿ. ಸಮಾರಂಭದ ಕಡೆಯಲ್ಲಿ ರವಿ ತನ್ನ ಕೃತಿಗಳ ಕುರಿತು ಮಾತಾಡಿದ್ದೆ ಹಿಟ್ ಆಗಿತ್ತು. ಕಿವಿಗಡಚಿಕ್ಕುವ ಕರತಾಡನಗಳು.

ಹಾಯ್ ಬೆಂಗಳೂರು ಆರಂಭದ ಐದಾರು ವರ್ಷಗಳ ಕಾಲ ವಿವಿಧ ಬಗೆಯ ಲೇಖನಗಳನ್ನು ಅವನ ಪ್ರೀತಿಯ ಮೇರೆಗೆ ಬರೆಯುತ್ತಿದ್ದೆ.

ದಾವಣಗೆರೆ ಕುರಿತು ಬರೆದಂತೆ ಎಲ್ಲಿ ಹುಡುಕಲಿ ಜೀವದುಸಿರಿನ ನನ್ನೂರು ಎಂಬ ನನ್ನ ಹುಟ್ಟೂರು ಕಡಕೋಳ ಕುರಿತು ನನ್ನಿಂದ ಬರೆಸಿದ್ದ. ತುಂಬಾ ಸೂಕ್ಷ್ಮ ಮನಸಿನ ಅವನು ಮನುಷ್ಯ ಸಂಬಂಧಗಳ ಕುರಿತು ಭಾರೀ ಭಾವುಕನಾಗಿದ್ದ.

ಒಂದು ಅಮವಾಸ್ಯೆ ದಿನ ಕಾರಲ್ಲಿ ಬೆಂಗಳೂರಿಂದ ತಾನೇ ಡ್ರೈವ್ ಮಾಡಿಕೊಂಡು ಮೂರೇ ತಾಸಲ್ಲಿ ದಿಢೀರಂತ ದಾವಣಗೆರೆಯ ನಮ್ಮನೆ ಮುಂದೆ ಬಂದು ಹಾರ್ನ್ ಮಾಡಿ 'ಏಯ್ ಬಾರೋ ಉಕ್ಕಡಗಾತ್ರಿ ದೆವ್ವಗಳ ದರ್ಶನಾ ತಗೊಂಬರೋಣ ಬಾ' ಅಂದ. ನಿಂತ ಪೆಟ್ಟಿನಲ್ಲೇ ನಾನೂ ಹೊರಟು ನಿಂತೆ. ನಮ್ಮ ರವೀಂದ್ರ ಹಂದಿಗನೂರ ಕಾಕಾನ ಗಝಲ್ ಕ್ಯಾಸೆಟ್ ಕೇಳಿ ಪಡೆದ. ಕಾಕಾನ ಎಂತು ವಿರತಿಯೋ ಸಂತಿ ಸೂಳೆಮಗನೇ ನಿನ್ನಂತರಂಗದ ಅನುವನರಿಯೋ ಎಂಬ ಕಡಕೋಳ ಮಡಿವಾಳಪ್ಪನವರ ತತ್ವಪದವನ್ನು ರವಿಕಾಕಾನ ಸಿರಿಕಂಠದಲ್ಲಿ ಮತ್ತೆ ಮತ್ತೆ ಕೇಳುವುದೇ ಬೆಳಗೆರೆ ರವಿಗೆ ಬಲುಖುಷಿ. ಉಕ್ಕಡಗಾತ್ರಿ ಮುಟ್ಟುವ ತನಕ ಅದೇ ಹಾಡನ್ನು ಮತ್ತೆ, ಮತ್ತೆ ತಿರು ತಿರುಗಿಸಿ ಆಲಿಸುತ್ತಿದ್ದ.

ಬೆಂಗಳೂರಿಗೆ ಹೋಗುವಾಗ ಕ್ಯಾಸೆಟ್ ತಗೊಂಡು ಹೋದ. ಎಷ್ಟೋ ಬಾರಿ ನಟ್ಟ ನಡುರಾತ್ರಿ ಮತ್ತವನ ಮಿತಿ ಮೀರಿದ ಮಧ್ಯರಾತ್ರಿಗಳ ನಡುವೆ ರವೀಂದ್ರ ಕಾಕಾನ ಗಝಲ್ ಕೆಸೆಟ್ ಹಾಕಿ ಫೋನಲ್ಲಿ ನನಗೆ ಕೇಳಿಸುತ್ತಿದ್ದ. ಒಂದು ಬಾರಿ ರವೀಂದ್ರ ಕಾಕಾ ಬೆಳಗೆರೆಯ ಕಚೇರಿಗೆ ಹೋಗಿ ಮೂರುತಾಸು ಹಾಡಿಬಂದ. ಅದರ ಮುಂದಿನವಾರ ಕಾಕಾನ ಫೋಟೋ ಹಾಕಿ ಖಾಸ್ ಬಾತ್ ತುಂಬೆಲ್ಲಾ ತುಂಬಿ ತುಳುಕಾಡುವ ಅವನ ಅಂಕಣ ಬರಹ. ಹೀಗೆ ಬೆಳಗೆರೆಯದು ನನ್ನೊಂದಿಗೆ ಅನನ್ಯತೆಯ ಸಾಂಸ್ಕೃತಿಕ ಒಡನಾಟ. ಅಂತಹ ಅನನ್ಯತೆಯ ಕೊಂಡಿ ಕಳಚಿ ಬಿತ್ತು.

- ಮಲ್ಲಿಕಾರ್ಜುನ ಕಡಕೋಳ


**ಜಮೀನು ಮಾರಾಟಕ್ಕಿದೆ**
ದಾವಣಗೆರೆ ಮಾಳಗೊಂಡನಹಳ್ಳಿ, ಹರಪನಹಳ್ಳಿ ರೋಡ್‌ನಲ್ಲಿ 3ಎಕರೆ 4 ಗುಂಟೆ ಜಮೀನು ಮಾರಾಟಕ್ಕಿದೆ. ಸಂಪರ್ಕಿಸಿ:
87109 64433

**2 BHK House For Rent**
East Face Ground Floor 2581/5, 4th Main, North, Sridhar Aquarium Cross, MCC A Block, DVG-4
95356 59259
94489 24513

**Required**
Male showroom sales executive with accounts experience in Tally for a reputed furniture showroom in Davanagere showroom. Salary will be paid best according to experience. selected Candidates should join immediately. Contact 86607 91774 for interview.

**ಮನೆ ಕೈ ತೋಟ ಹಾಗೂ ಜಮೀನಿಗೆ ಉಪಯೋಗಿಸಲು ಉತ್ತಮವಾದ ಕಾಂಪೋಸ್ಟ್ ಗೊಬ್ಬರ ದೊರೆಯುತ್ತದೆ.**
ಸಂಪರ್ಕಿಸಿ : ದಾವಣಗೆರೆ.
ಮೊ. 93411-71212

**ಸೈಟುಗಳು ಮಾರಾಟಕ್ಕಿವೆ**
ಕಡೇಕೊಪ್ಪ ರೈಸ್ ಮಿಲ್ ಬಳಿ ಪಶ್ಚಿಮಾಭಿಮುಖವಾಗಿರುವ 30x40 ಅಳತೆಯ ಅಲಿನೇಷನ್ ಆಗಿರುವ 2 ನಿವೇಶನಗಳು ಹಾಗೂ ಭೂಮಿಕಾ ನಗರದಲ್ಲಿ ದಕ್ಷಿಣಾಭಿಮುಖವಾಗಿರುವ 30x70 ಅಳತೆಯ ನಿವೇಶನ ಮಾರಾಟಕ್ಕಿವೆ. ಸಂಪರ್ಕಿಸಿ :
96636-66870, 98443-04848

**WALL PAPER**
@ offer Price
10 ₹ per Sq.Ft
(600 - 900 per Roll)
Contact :
INTERIOR HIVE
98860-04771
63635-61331

**ಬಾಡಿಗೆ/ಭೋಗ್ಯಕ್ಕೆ ಮನೆ ಇದೆ**
ಕರ್ನಾಟಕ ಗೃಹ ಮಂಡಳಿ, ಮೊದಲ ಹಂತ, ತುಂಗಭದ್ರಾ ಬಡಾವಣೆ, ಹಳೇ ಕುಂದುವಾಡ, ದಾವಣಗೆರೆ (2 ಬಿಹೆಚ್‌ಕೆ, LIG)
98860 51239
98862 81050
(No Brokers)

**ಜಾಗ ಮಾರಾಟಕ್ಕೆ ಇದೆ**
ದಾವಣಗೆರೆ ಜಗಳೂರು ರಸ್ತೆ, ಆಲೂರುಹಟ್ಟಿ ಹತ್ತಿರ ಇರುವ 1 ಎಕರೆ ಎನ್.ಎ. (ಕೈಗಾರಿಕೆ) ಜಾಗ ಮಾರಾಟಕ್ಕಿದೆ. 80 ತ್ಯಾಗದ ಮರ, 55x26 ಅಡಿ ಶೆಡ್ ಹಾಗೂ ಬೋರ್‌ವೆಲ್ ಸೌಕರ್ಯ ಮತ್ತು 24x7 ಕರೆಂಟ್ ಸೌಲಭ್ಯ ಇದೆ. ಆಸಕ್ತರು ಸಂಪರ್ಕಿಸಿ :
ಮೊ: 83102 42294

**ಹೊಸ ಮನೆ ಮಾರಾಟಕ್ಕಿದೆ**
30×50 ಪಶ್ಚಿಮ ದಿಕ್ಕಿನ ಸೈಟ್‌ನಲ್ಲಿ 13 ಚದುರದಲ್ಲಿ ಎಲ್ಲಾ ಆಧುನಿಕ ವ್ಯವಸ್ಥೆ ಇರುವ, ವಾಸ್ತು ಪ್ರಕಾರ ಕಟ್ಟಿರುವ 2 ಬೆಡ್‌ರೂಂ ವಾಸದ ಮನೆಗಳು ಬಾಲಾಜಿ ಲೇ ಔಟ್‌ನಲ್ಲಿ ಮಾರಾಟಕ್ಕಿವೆ. ವಿಚಾರಿಸಿ :
98448 82366

**ನೇರ ಪರೀಕ್ಷೆಗಳು**
S.S.S.L.C, PUC, Technical & Non Technical Courses, Pharmacy & BHMS (Government & Private College)
ಸಂಪರ್ಕಿಸಿ: ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್ ರಾಮ್ & ಕೋ ಸರ್ಕಲ್, ದಾವಣಗೆರೆ.
87490 24789
87620 58369

**ದೂರ ಶಿಕ್ಷಣ ಪರೀಕ್ಷೆಗಳು**
UGC, AICT & DEB Recognisde University
S.S.L.C. PUC, B.A, B.Com, B.Sc, B.C.A, M.A, M.Com, M.Sc, B.Lib, M.Lib, M.B.A, M.C.A. Diploma Course, B.Tech, Para Medical Course & All Courses
77609 55550, 96200 28627

**ವಾಟರ್ ಪ್ರೂಫಿಂಗ್**
ನಿಮ್ಮ ಮನೆ, ಬಿಲ್ಡಿಂಗ್ ಕಟ್ಟಡಗಳ ಬಾಲ್ಕನಿ, ಟೆರೇಸ್, ಬಾತ್‌ರೂಂ, ಸಂಪು, O.H. ಟ್ಯಾಂಕ್, ಗಾರ್ಡನ್ ಏರಿಯಾ, ಮೆಟ್ಟಿಲುಗಳು ಯಾವುದೇ ರೀತಿಯ ನೀರಿನ ಲೀಕೇಜ್ ಇದ್ದರೆ ಸಂಪರ್ಕಿಸಿ :
8095509025
ಕೆಲಸ 100 % ಗ್ಯಾರಂಟಿ

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**JOBS**
MCS ACADEMY
Training & Placement Cell
98444 92888

ವಾಹ್ ಕಾಫಿ !!
ರಿಚ್ ಕಾಫಿ !!
SRK COFFEE
ಶ್ರೀ ರಾಮಕೃಷ್ಣ ಕಾಫಿ ಕಂಪನಿ
ಮಂಡಿಪೇಟೆ, ದಾವಣಗೆರೆ.
ಮೊಬೈಲ್ : 94487 27084

**WANTED**
Experienced Tally Opertor. Full time Job, Attractive Salary.
70190 73080

**ವಾಸ್ತು ಮನೆ, ಶಾಪ್ ಬಾಡಿಗೆ**
ಶಾಪ್, ಗ್ರೌಂಡ್ ಫ್ಲೋರ್ ಪೂರ್ವ ಮುಂಬಾಗಿಲಿನ 2 & 3 ಬೆಡ್ ರೂಂ, ನೀರಿನ ಸೌಕರ್ಯ, ಪಾರ್ಕಿಂಗ್, Semi Furnished ಇದೆ.
#408, ಸಮೃದ್ಧಿ ನಿಲಯ, ಪಿ.ಜೆ.ಬಡಾವಣೆ, ಮೋದಿ ಕಾಂಪೌಂಡ್ ಹತ್ತಿರ.
93807 97651
95386 41980

**V-One Flowers & Decorators**
ನಮ್ಮಲ್ಲಿ ಮದುವೆ ಹಾಗೂ ಇತರೆ ಸಮಾರಂಭಗಳಿಗೆ ಉತ್ತಮ ಗುಣಮಟ್ಟದ ಜರ್ಬರಾ ಹೂ, ಡಚ್ ರೋಸ್, ಕಾರ್ನಿ ಸಿಂಷ, ಆರ್ಕಿಡ್, ಅಸ್‌ಪರ್ಸ್, ಪಿಶ್ ಲಿವಸ್ ಹಾಗೂ ಇತರೆ ಹೂಗಳು ಲಭ್ಯ
77601 55550 / 72046 24539


## ಮಾನ್ಯ ಗೌರವಾನ್ವಿತ 1ನೇ ಜೆ.ಎಂ. ಎಫ್.ಸಿ. ನ್ಯಾಯಾಲಯ, ದಾವಣಗೆರೆ.

ಸಿ.ಆರ್.ಮಿಸ್. ನಂ. 141/2020

ಅರ್ಜಿದಾರರು : ಆಲನ್ ವಿನ್ಸಟನ್ ಡಿ.ಬಿನ್ ಡೇವಿಡ್ ಎಸ್. ವಯಸ್ಸು ಸುಮಾರು 27 ವರ್ಷ, ಉದ್ಯೋಗ : ವೈದ್ಯಕೀಯ ವಿದ್ಯಾರ್ಥಿ, ವಾಸ : 3ನೇ ಮುಖ್ಯರಸ್ತೆ, 9ನೇ ತಿರುವು, ವಿನೋಬನಗರ, ದಾವಣಗೆರೆ. - ವಿರುದ್ಧ -
ಎದುರುದಾರರು : ಜನನ ಮತ್ತು ಮರಣ ನೋಂದಣಾಧಿಕಾರಿಗಳು, ಮಹಾನಗರಪಾಲಿಕೆ, ದಾವಣಗೆರೆ.

### ಸಾರ್ವಜನಿಕ ನೋಟೀಸ್

ಮೇಲ್ಕಂಡ ಪ್ರಕರಣವನ್ನು ಅರ್ಜಿದಾರನು ತಮ್ಮ ತಂದೆಯ ತಾಯಿಯಾದ ಸಂತೋಷಮ್ಮ ಕೋಂ. ಸೈಮನ್ ಹೆಚ್. ಇವರು ದಿನಾಂಕ : 06.12.2018ರಂದು ಅರ್ಜಿದಾರನ ಮೇಲಿನ ವಿಳಾಸದ ಮನೆಯಲ್ಲಿ ಮರಣ ಹೊಂದಿರುವುದರಿಂದ ಸದರಿ ಅಂಶವನ್ನು ಎದುರುದಾರರು ನೋಂದಾಯಿಸಿಕೊಂಡು ಮರಣ ಸಮರ್ಥನಾ ಪತ್ರವನ್ನು ನೀಡುವಂತೆ ಕೋರಿ ಅರ್ಜಿದಾರನು ಅರ್ಜಿ ಸಲ್ಲಿಸಿರುತ್ತಾರೆ.

ಸದರಿ ಅರ್ಜಿದಾರನ ಅರ್ಜಿಯನ್ನು ಮಾನ್ಯ ನ್ಯಾಯಾಲಯವು ನೋಂದಾಯಿಸಿಕೊಂಡು ಪ್ರಕರಣವನ್ನು ದಿನಾಂಕ : 18.12.2020 ರಂದು ಬೆಳಿಗ್ಗೆ 11.00 ಗಂಟೆ ವಿಚಾರಣೆಗೆ ನಿಗದಿಪಡಿಸಿದ್ದು, ಅರ್ಜಿದಾರನ ಅರ್ಜಿಗೆ ಯಾರಾದರೂ ತಕರಾರು ಇದ್ದಲ್ಲಿ ತಾವಾಗಲೀ, ತಮ್ಮ ಪರ ವಕೀಲರ ಮುಖಾಂತರವಾಗಲೀ ನಿಗದಿತ ದಿನಾಂಕ, ಸಮಯದಂದು ಮೇಲ್ಕಂಡ ನ್ಯಾಯಾಲಯದಲ್ಲಿ ತಮ್ಮ ಅಹವಾಲು ಸಲ್ಲಿಸಬಹುದು. ತಪ್ಪಿದಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು ತಿಳಿಯಿರಿ. ನ್ಯಾಯಾಲಯದ ಅಪ್ಪಣೆಯ ಮೇರೆಗೆ ದಿನಾಂಕ : 11.11.2020 ರಂದು ನೀಡಲಾಗಿದೆ.

ಅರ್ಜಿದಾರರ ಪರ ವಕೀಲರು
ಸಹಿ/- ಶ್ರೀ ತಿಪ್ಪೇಸ್ವಾಮಿ ಎಸ್., ವಕೀಲರು, ವಿನೋಬನಗರ, ದಾವಣಗೆರೆ.
ಸ್ಥಳ : ದಾವಣಗೆರೆ. ದಿನಾಂಕ :11.11.2020

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೇದಾರರು
ಮಾನ್ಯ ಗೌರವಾನ್ವಿತ 1ನೇ ಜೆ.ಎಂ.ಎಫ್.ಸಿ ನ್ಯಾಯಾಲಯ, ದಾವಣಗೆರೆ.

## ಮಾನ್ಯ ಗೌರವಾನ್ವಿತ 1ನೇ ಜೆ.ಎಂ. ಎಫ್.ಸಿ. ನ್ಯಾಯಾಲಯ, ದಾವಣಗೆರೆ.

ಸಿ.ಆರ್.ಮಿಸ್. ನಂ. 143/2020

ಅರ್ಜಿದಾರರು : ಆಲನ್ ವಿನ್ಸಟನ್ ಡಿ.ಬಿನ್ ಡೇವಿಡ್ ಎಸ್. ವಯಸ್ಸು ಸುಮಾರು 27 ವರ್ಷ, ಉದ್ಯೋಗ : ವೈದ್ಯಕೀಯ ವಿದ್ಯಾರ್ಥಿ, ವಾಸ : 3ನೇ ಮುಖ್ಯರಸ್ತೆ, 9ನೇ ತಿರುವು, ವಿನೋಬನಗರ, ದಾವಣಗೆರೆ. - ವಿರುದ್ಧ -
ಎದುರುದಾರರು : ಜನನ ಮತ್ತು ಮರಣ ನೋಂದಣಾಧಿಕಾರಿಗಳು, ಮಹಾನಗರಪಾಲಿಕೆ, ದಾವಣಗೆರೆ.

### ಸಾರ್ವಜನಿಕ ನೋಟೀಸ್

ಮೇಲ್ಕಂಡ ಪ್ರಕರಣವನ್ನು ಅರ್ಜಿದಾರನು ತಮ್ಮ ತಂದೆಯ ತಂದೆ (ಅಜ್ಜ) ಯಾದ ಸೈಮನ್ ಹೆಚ್.ಬಿನ್ ಲಾಜರ್ ಹೆಚ್. ಇವರು ದಿನಾಂಕ : 31.07.1993 ರಂದು ಅರ್ಜಿದಾರನ ಮೇಲಿನ ವಿಳಾಸದ ಮನೆಯಲ್ಲಿ ಮರಣ ಹೊಂದಿರುವುದರಿಂದ ಸದರಿ ಅಂಶವನ್ನು ಎದುರುದಾರರು ನೋಂದಾಯಿಸಿಕೊಂಡು ಮರಣ ಸಮರ್ಥನಾ ಪತ್ರವನ್ನು ನೀಡುವಂತೆ ಕೋರಿ ಅರ್ಜಿದಾರರು ಅರ್ಜಿ ಸಲ್ಲಿಸಿರುತ್ತಾರೆ.

ಸದರಿ ಅರ್ಜಿದಾರನ ಅರ್ಜಿಯನ್ನು ಮಾನ್ಯ ನ್ಯಾಯಾಲಯವು ನೋಂದಾಯಿಸಿಕೊಂಡು ಪ್ರಕರಣವನ್ನು ದಿನಾಂಕ : 18.12.2020 ರಂದು ಬೆಳಿಗ್ಗೆ 11.00 ಗಂಟೆ ವಿಚಾರಣೆಗೆ ನಿಗದಿಪಡಿಸಿದ್ದು, ಅರ್ಜಿದಾರನ ಅರ್ಜಿಗೆ ಯಾರಾದರೂ ತಕರಾರು ಇದ್ದಲ್ಲಿ ತಾವಾಗಲೀ, ತಮ್ಮ ಪರ ವಕೀಲರ ಮುಖಾಂತರವಾಗಲೀ ನಿಗದಿತ ದಿನಾಂಕ, ಸಮಯದಂದು ಮೇಲ್ಕಂಡ ನ್ಯಾಯಾಲಯದಲ್ಲಿ ತಮ್ಮ ಅಹವಾಲು ಸಲ್ಲಿಸಬಹುದು. ತಪ್ಪಿದಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು ತಿಳಿಯಿರಿ. ನ್ಯಾಯಾಲಯದ ಅಪ್ಪಣೆಯ ಮೇರೆಗೆ ದಿನಾಂಕ : 11.11.2020 ರಂದು ನೀಡಲಾಗಿದೆ.

ಅರ್ಜಿದಾರರ ಪರ ವಕೀಲರು
ಸಹಿ/- ಶ್ರೀ ತಿಪ್ಪೇಸ್ವಾಮಿ ಎಸ್., ವಕೀಲರು, ವಿನೋಬನಗರ, ದಾವಣಗೆರೆ.
ಸ್ಥಳ : ದಾವಣಗೆರೆ. ದಿನಾಂಕ :11.11.2020

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೇದಾರರು
ಮಾನ್ಯ ಗೌರವಾನ್ವಿತ 1ನೇ ಜೆ.ಎಂ.ಎಫ್.ಸಿ ನ್ಯಾಯಾಲಯ, ದಾವಣಗೆರೆ.

## IN THE COURT OF THE CIVIL JUDGE (JUNIOR DIVISION) AT DAVANAGERE

**P.& S.C.NO.06/2020**
**Petitioners : Smt. DRAKSHAYANAMMA T.H. And OTHERS**
VERSUS
**RESPONDENTS : NIL**

### NOTICE

Whereas **Smt. Drakshyanamma T.H., Smt Vanitha H.R., Smt. Kavita R.G. and Smt. Latha M. Kappali** are the legal heirs of Late **T.H. Chandrashekharappa** and have instituted the above petition for grant of succession certificate, whoever has got any interest or objection in the subject matter for issue of succession certificate may appear before this hon'ble court in person or by a pleader on 22.12.2020 11: 00 AM to answer the same, failing which the petition will be disposed exparte. Given under my hand and the seal of the court, this **09th day of November 2020.**

### SCHEDULE

1. 1,000 equity Shres Purchased by T.H.Chandrashekharappa on 20.12.2014 bearing distinctive no 2725001 to 2726000, with registered folio no.0049396 and certificate no.00003272, duly issued by Punjab National Bank.

Given under my hand and seal of the Hon'ble Court on this **09th day of November 2020.**

**Advocate for Petitioners**
**S.S. Salim**

**By order of the Court**
**Bhemanna A.D.**
Chief Ministerial officer/Sheristedar Prl. Civil Judge (Jr.Div) Court, Davanagere


**ಮಾಂತ್ರಿಕ ಮೋಡಿ ಬೆಟ್ಟಪ್ಪ**
ನಂ.1 ವಶೀಕರಣ ಸ್ಪೆಷಲಿಸ್ಟ್
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು ಶೀಘ್ರದಲ್ಲಿ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ: ಗಾಂಧಿ ಸರ್ಕಲ್, ದಾವಣಗೆರೆ.
89716 99826

**ಅಧಿಕೃತ ಚೀಟಿ ಸಂಸ್ಥೆ**
ರೂ.5 ಲಕ್ಷದ ಚೀಟಿ ಪ್ರಾರಂಭ.
ತಿಂಗಳ ಕಂತು 10,000/- ದಿಂದ 6,500/- ಮಾತ್ರ
ಸ್ಕಂದ ಚಿಟ್ ಫಂಡ್ಸ್ (ರಿ) ದಾವಣಗೆರೆ-02
84531 61869

**ಶ್ರೀ ಸಾಯಿಬಾಲಾಜಿ ಜ್ಯೋತಿಷ್ಯಾಲಯ**
ಪಂಡಿತ್ ಸಾಯಿನಾಥ್ ಕುಡ್ಲ
ಇವರು ನಿಮ್ಮ ಜೀವನದ ಸಂಪೂರ್ಣ ಭವಿಷ್ಯವನ್ನು ಹೇಳುತ್ತಾರೆ. ವಿದ್ಯೆ, ಉದ್ಯೋಗ, ಮಾಟ-ಮಂತ್ರ, ವಶೀಕರಣ, ಸಾಲಬಾಧೆ ಇನ್ನೂ ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ. ವಿಳಾಸ: ವಿದ್ಯಾನಗರ 1ನೇ ಬಸ್ ಸ್ಟಾಪ್ ಹತ್ತಿರ, ಕೆನರಾ ಬ್ಯಾಂಕ್ ಪಕ್ಕ, ದಾವಣಗೆರೆ.
ಮೊ: 95919 84627

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ॥ ಎಸ್.ಎಂ. ಸೇಠಿ. ಫೋನ್ : 96322 95561
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.

# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಭಾನುವಾರ, ನವೆಂಬರ್ 15, 2020


## ಕೆಲವು ಪ್ರೋಟೀನ್‌ಗಳಿಂದಾಗಿ ಮಕ್ಕಳಿಗೆ ಕೊರೊನಾ ಕಾಡದು

ವಾಷಿಂಗ್ಟನ್, ನ. 14 – ಕೊರೊನಾ ವೈರಸ್ ಹಿರಿಯರು ಹಾಗೂ ವೃದ್ಧರಲ್ಲಿ ಹೆಚ್ಚಾಗಿ ಕಾಣಿಸಿಕೊಂಡು, ಮಕ್ಕಳಲ್ಲಿ ಕಾಣಿಸಿಕೊಳ್ಳದೇ ಇರುವ ಕಾರಣವನ್ನು ಪತ್ತೆ ಮಾಡಿರುವುದಾಗಿ ವಿಜ್ಞಾನಿಗಳು ತಿಳಿಸಿದ್ದು, ಇದರಿಂದ ಚಿಕಿತ್ಸೆಗೆ ಮಾರ್ಗ ಕಂಡು ಹಿಡಿಯಲು ನೆರವಾಗಲಿದೆ ಎಂದು ತಿಳಿಸಿದ್ದಾರೆ.

**ಅಮೆರಿಕದ ವಿಜ್ಞಾನಿಗಳ ಸಂಶೋಧನೆ**

ಅಮೆರಿಕದ ವಂಡ್ರೆಬಿಲ್ಟ್ ವೈದ್ಯಕೀಯ ಕೇಂದ್ರ ವಿಶ್ವವಿದ್ಯಾನಿಲಯದ ಸಂಶೋಧಕರ ಪ್ರಕಾರ, ಸಾರ್ಸ್ - ಸಿಓವಿ - 2 ದಾಳಿ ನಡೆಸಲು ಬೇಕಾದ ಪ್ರೋಟೀನ್‌ಗಳ ಪ್ರಮಾಣ ಮಕ್ಕಳಲ್ಲಿ ಕಡಿಮೆ ಇರುತ್ತದೆ.

ಈ ಅಧ್ಯಯನವನ್ನು ಜರ್ನಲ್ ಆಫ್ ಕ್ಲಿನಿಕಲ್ ಇನ್ವೆಸ್ಟಿಗೇಷನ್ ನಿಯತಕಾಲಿಕದಲ್ಲಿ ಪ್ರಕಟಿಸಲಾಗಿದೆ. ಹಿರಿಯರಲ್ಲಿ ಕೊರೊನಾ ತಡೆಯಲು ಈ ಪ್ರೋಟೀನ್ ತಡೆಯುವ ಅಗತ್ಯವಿದೆ ಎಂದು ತಿಳಿಸಲಾಗಿದೆ. ಎಳೆಯರು ಹಾಗೂ ಚಿಕ್ಕ ಮಕ್ಕಳು ಕೊರೊನಾ ಸೋಂಕಿಗೆ ಗುರಿಯಾಗುವ ಇಲ್ಲವೇ ತೀವ್ರ ಲಕ್ಷಣಗಳು ಕಾಣುವ ಸಾಧ್ಯತೆ ಕಡಿಮೆ ಏಕಿದೆ ಎಂಬ ಬಗ್ಗೆ ನಾವು ಅಧ್ಯಯನ ನಡೆಸಿದ್ದೆವು ಎಂದು ಅಧ್ಯಯನದಲ್ಲಿ (7ನೇ ಪುಟಕ್ಕೆ)

## ಮರಾಠ ಅಭಿವೃದ್ಧಿ ಪ್ರಾಧಿಕಾರ ಸ್ಥಾಪನೆಗೆ 50 ಕೋಟಿ ರೂ. ಬಿಡುಗಡೆ

ಬೆಂಗಳೂರು, ನ. 15 - ಮರಾಠ ಅಭಿವೃದ್ಧಿ ಪ್ರಾಧಿಕಾರ ಸ್ಥಾಪನೆಗೆ ರಾಜ್ಯ ಸರ್ಕಾರ ಮುಂದಾಗಿದ್ದು, 50 ಕೋಟಿ ರೂ.ಗಳ ಅನುದಾನ ಬಿಡುಗಡೆ ಮಾಡಿದೆ.ಸಮಾಜದ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ಧಾರ್ಮಿಕ ಅಭಿವೃದ್ಧಿಗಾಗಿ ಪ್ರಾಧಿಕಾರ ಸ್ಥಾಪಿಸಬೇಕು ಹಾಗೂ ಪ್ರಾಧಿಕಾರಕ್ಕೆ 50 ಕೋಟಿ ರೂ. ಬಿಡುಗಡೆ ಮಾಡಬೇಕೆಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಆದೇಶ ಹೊರಡಿಸಿದ್ದಾರೆ.

# ಪ್ರಚೋದಿಸಿದರೆ ಪ್ರಚಂಡ ಉತ್ತರ


## ಚೀನಾ, ಪಾಕಿಸ್ತಾನಗಳಿಗೆ ಪ್ರಧಾನಿ ನರೇಂದ್ರ ಮೋದಿ ಎಚ್ಚರಿಕೆ

ಲಾಗೆವಾಲಾ (ರಾಜಸ್ಥಾನ), ನ. 14 – ದೇಶದ ವಿರೋಧಿಗಳು ನಮ್ಮನ್ನು ಪ್ರಚೋದಿಸಿದರೆ 'ಪ್ರಚಂಡ ಉತ್ತರ' ನೀಡುವುದಾಗಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಸ್ಪಷ್ಟವಾದ ಎಚ್ಚರಿಕೆ ನೀಡಿದ್ದಾರೆ. 2014ರಲ್ಲಿ ಅಧಿಕಾರ ವಹಿಸಿಕೊಂಡ ನಂತರ ಸೈನಿಕರ ಜೊತೆ ದೀಪಾವಳಿ ಆಚರಿಸುತ್ತಿರುವ ಪ್ರಧಾನಿ, ಈ ಬಾರಿ ಲೊಂಗೆವಾಲಾ ಪೋಸ್ಟ್‌ಗೆ ತೆರಳಿದ್ದಾರೆ.

ಮುಂಚೂಣಿ ಠಾಣೆಯಲ್ಲಿ ಸೈನಿಕರನ್ನು ಉದ್ದೇಶಿಸಿ ಮಾತನಾಡಿರುವ ಪ್ರಧಾನಿ, ವಿಸ್ತರಣಾವಾದಿ ಶಕ್ತಿಗಳಿಂದಾಗಿ ಪ್ರಪಂಚಕ್ಕೆ ಸಮಸ್ಯೆಗಳು ಉಂಟಾಗಿವೆ. ವಿಸ್ತರಣಾವಾದ 18ನೇ ಶತಮಾನದ ವಿಕ್ಷಿಪ್ತ ಮನಸ್ಥಿತಿ ತೋರಿಸುತ್ತದೆ ಎಂದಿದ್ದಾರೆ.

1971ರ ಯುದ್ಧದ ಸಮಯದಲ್ಲಿ ಲಾಂಗೆವಾಲಾ ಠಾಣೆಯಲ್ಲಿ ಭಾರತದ ಕಡಿಮೆ ಸಂಖ್ಯೆಯ ಸೈನಿಕರಿದ್ದರೂ ಪಾಕಿಸ್ತಾನದ ದೊಡ್ಡ ಪಡೆಯನ್ನು ಎದುರಿಸಿ ನಿಂತಿದ್ದರು. ಈ ಘಟನೆ ದೇಶಕ್ಕೆ ಅಂದಿನಿಂದಲೂ ಸ್ಫೂರ್ತಿ ತುಂಬುತ್ತಾ ಬಂದಿದೆ.

ವಿಸ್ತರಣಾವಾದಿ ಶಕ್ತಿಗಳ ವಿರುದ್ಧ ಭಾರತ ಬಲಿಷ್ಠ ದನಿಯಾಗಿದೆ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ.



**ನಾನು ಸೈನಿಕರ ನಡುವೆ ಬಂದಾಗ ಮಾತ್ರ ನನ್ನ ದೀಪಾವಳಿ ಸಂಪೂರ್ಣವಾಗುತ್ತದೆ. ಈ ಹಬ್ಬದಲ್ಲಿ ನಾನು ಸೈನಿಕರಿಂದ ದೂರವಿರಲು ಸಾಧ್ಯವಿಲ್ಲ. ಸೈನಿಕರ ಜೊತೆ ಹೆಚ್ಚು ಸಮಯ ಕಳೆದಷ್ಟೂ ದೇಶದ ಸೇವೆ ಮಾಡುವ ಹಾಗೂ ರಕ್ಷಿಸುವ ತಮ್ಮ ಬದ್ಧತೆ ಬಲವಾಗುತ್ತದೆ.**

**- ನರೇಂದ್ರ ಮೋದಿ**

ಇದೇ ವೇಳೆ ಪಾಕಿಸ್ತಾನಕ್ಕೂ ಎಚ್ಚರಿಕೆ ನೀಡಿರುವ ಪ್ರಧಾನಿ, ನಮ್ಮ ಸೈನಿಕರು ಉಗ್ರವಾದ ಪ್ರಾಯೋಜಿಸುವವರನ್ನು ಅವರ ನೆಲದಲ್ಲೇ ಬಡಿದಿದ್ದಾರೆ ಎಂದಿದ್ದಾರೆ. ಅವರು ಪಾಕಿಸ್ತಾನದ ವಿರುದ್ಧ ನಡೆಸಲಾದ ವೈಮಾನಿಕ ದಾಳಿ ಹಾಗೂ ಸರ್ಜಿಕಲ್ ದಾಳಿಯನ್ನು ಪ್ರಸ್ತಾಪಿಸಿದ್ದರು.

ನಮ್ಮ ದಿಟ್ಟ ಸೈನಿಕರು ಗಡಿಗಳನ್ನು ರಕ್ಷಿಸಿಕೊಳ್ಳುವುದನ್ನು ವಿಶ್ವದ ಯಾವ ಶಕ್ತಿಯಿಂದಲೂ ಸಾಧ್ಯವಿಲ್ಲ. ನಾವು ನಮ್ಮ ಹಿತಗಳನ್ನು ಯಾವ ಬೆಲೆ ತೆತ್ತಾದರೂ ಕಾಪಾಡಿಕೊಳ್ಳುವುದರಲ್ಲಿ ಹೊಂದಾಣಿಕೆ ಮಾಡಿಕೊಳ್ಳುವುದಿಲ್ಲ ಎಂಬುದು ವಿಶ್ವಕ್ಕೇ ತಿಳಿದಿದೆ ಎಂದಿದ್ದಾರೆ.

ಇತರರನ್ನು ಅರ್ಥ ಮಾಡಿಕೊಳ್ಳುವುದು ಹಾಗೂ ಅರ್ಥ ಮಾಡಿಸುವುದರಲ್ಲಿ ಭಾರತಕ್ಕೆ ನಂಬಿಕೆ ಇದೆ. ಆದರೆ, ಪರೀಕ್ಷೆಗೆ ಗುರಿಪಡಿಸಿದರೆ ತೀವ್ರ ಉತ್ತರ ನೀಡುತ್ತೇವೆ. ನಮಗೆ ಸವಾಲೆಸೆಯುವವರಿಗೆ ತಕ್ಕ ಉತ್ತರ ನೀಡುವ ಸಾಮರ್ಥ್ಯ ಹಾಗೂ ರಾಜಕೀಯ ಇಚ್ಛಾಶಕ್ತಿ ಇದೆ ಎಂದವರು ಹೇಳಿದ್ದಾರೆ.

ಬಲಿಷ್ಠ ಸಾಮರ್ಥ್ಯ ಹೊಂದುವ ಅಗತ್ಯವನ್ನು ಒತ್ತಿ ಹೇಳಿರುವ ಪ್ರಧಾನಿ ಮೋದಿ, ಅಂತರರಾಷ್ಟ್ರೀಯ ಸಹಕಾರ ಹಾಗೂ ಸಮೀಕರಣಗಳು ಉನ್ನತವಾಗಿರುವುದರ ನಡುವೆಯೂ, ಸತರ್ಕವಾಗಿರುವುದು ಸಂತೋಷ ತರುತ್ತದೆ. ಬಲಿಷ್ಠವಾಗಿದ್ದರೆ ಶಾಂತಿ ಸಿಗುತ್ತದೆ ಎಂದು ಮೋದಿ ತಿಳಿಸಿದ್ದಾರೆ.

ದಾಳಿ ನಡೆಸುವವರನ್ನು ಎದುರಿಸುವ ಸಾಮರ್ಥ್ಯ ಹೊಂದಿರುವ ದೇಶಗಳು ಮಾತ್ರ ಸುರಕ್ಷಿತವಾಗಿವೆ ಹಾಗೂ ಮುಂದುವರೆದಿವೆ ಎಂಬುದನ್ನು ಇತಿಹಾಸ ತೋರಿಸುತ್ತದೆ. ದೇಶದ ಸೈನಿಕರ ಜೊತೆ 130 ಕೋಟಿ ಭಾರತೀಯರಿದ್ದಾರೆ ಹಾಗೂ ಅವರ ದಿಟ್ಟತನಕ್ಕೆ ವಂದಿಸುತ್ತಾರೆ ಎಂದು ಮೋದಿ ಹೇಳಿದ್ದಾರೆ.

## ತಂದೆ ಬಿಡಿಸಿಕೊಳ್ಳಲು ಪೊಲೀಸ್ ವ್ಯಾನ್‌ಗೆ ತಲೆ ಚಚ್ಚಿಕೊಂಡಿದ್ದ ಮಗಳು

ಬುಲಂದ್‌ಶಹರ್, ನ. 14 – ಪೊಲೀಸ್ ವ್ಯವಸ್ಥೆಗೆ ಮಾನವೀಯ ಸ್ಪರ್ಶ ನೀಡಲು ಮುಂದಾಗಿರುವ ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್, ಅಕ್ರಮವಾಗಿ ಪಟಾಕಿ ಮಾರುವಾಗ ಸಿಕ್ಕಿ ಬಿದ್ದಿದ್ದ ಬಡ ವ್ಯಕ್ತಿಯೊಬ್ಬರನ್ನು ದೀಪಾವಳಿ ಮುನ್ನಾ ದಿನ ಬಿಡುಗಡೆ ಮಾಡಲು ಆದೇಶ ಹೊರಡಿಸಿದ್ದಾರಲ್ಲದೇ, ಅವರ ಅಪ್ರಾಪ್ತ ಮಗಳಿಗೆ ಸಿಹಿ ಹಾಗೂ (7ನೇ ಪುಟಕ್ಕೆ)

**ಬಂಧಿತ ಪಟಾಕಿ ಮಾರಾಟಗಾರನ ಬಿಡಿಸಿ ಮಗಳಿಗೆ ದೀಪಾವಳಿ ಕೊಡುಗೆ ನೀಡಿದ ಯೋಗಿ**

## ನಗರದಲ್ಲಿ ನಾಳೆ ರಾಜ್ಯ ಮಟ್ಟದ ಅಖಿಲ ಭಾರತ ಸಹಕಾರ ಸಪ್ತಾಹ



ದಾವಣಗೆರೆ,ನ.14-67ನೇ ಅಖಿಲ ಭಾರತ ಸಹಕಾರ ಸಪ್ತಾಹ ಕಾರ್ಯಕ್ರಮವು ನಾಡಿದ್ದು ದಿನಾಂಕ 16ರ ಸೋಮವಾರ ಬೆಳಗ್ಗೆ 11ಕ್ಕೆ ನಗರದ ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ ನಡೆಯಲಿದೆ.

'ಕೊರೊನಾ ಸೋಂಕು - ಆತ್ಮನಿರ್ಭರ ಭಾರತ-ಸಹಕಾರ ಸಂಸ್ಥೆಗಳು' (7ನೇ ಪುಟಕ್ಕೆ)



**ಹೈಸ್ಕೂಲ್ ಮೈದಾನದಲ್ಲಿ ಆಕಾಶ ಬುಟ್ಟಿಗಳ ಸಾಲು**

**ದಾವಣಗೆರೆಯಲ್ಲಿ ದೀಪಾವಳಿ ಹಬ್ಬದ ಸಂಭ್ರಮ ಗರಿಗೆದರಿದೆ. ಮಾರುಕಟ್ಟೆ ಪ್ರದೇಶಗಳು ಜನರಿಂದ ತುಂಬಿವೆ. ಹೈಸ್ಕೂಲ್ ಮೈದಾನದಲ್ಲಿ ಪಟಾಕಿ, ಆಕಾಶಬುಟ್ಟಿಗಳನ್ನು ಖರೀದಿಸಲು ಜನತೆ ಆಗಮಿಸುತ್ತಿದ್ದಾರೆ.**

## ಪ್ರವಾಹ ಪೀಡಿತರಿಗೆ ಕೇಂದ್ರದಿಂದ ಇನ್ನಷ್ಟು ನೆರವಿಗೆ ಪ್ರಸ್ತಾಪ

ಬೆಂಗಳೂರು, ನ. 14 – ರಾಜ್ಯದ ಪ್ರವಾಹ ಪೀಡಿತ ಜಿಲ್ಲೆಗಳಿಗೆ ಕೇಂದ್ರದಿಂದ ಇನ್ನಷ್ಟು ನೆರವು ಕೇಳುವುದಾಗಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಿಳಿಸಿದ್ದಾರೆ.

ಕೇಂದ್ರ ಸರ್ಕಾರ ಕರ್ನಾಟಕಕ್ಕೆ ರಾಷ್ಟ್ರೀಯ ವಿಕೋಪ ಸ್ಪಂದನಾ ನಿಧಿಯಡಿ 577.74 ಕೋಟಿ ರೂ.ಗಳನ್ನು ನಿನ್ನೆ ಬಿಡುಗಡೆ ಮಾಡಿತ್ತು. ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಯಡಿಯೂರಪ್ಪನವರಿಗೆ ಕೇಂದ್ರ ಸರ್ಕಾರದ ನೆರವು ಕಡಿಮೆಯಾಯಿತೇ? ಎಂದು ಕೇಳಿದಾಗ, ನಾವು ಇನ್ನಷ್ಟು ನೆರವು ಕೇಳಲಿದ್ದೇವೆ ಎಂದು ಉತ್ತರಿಸಿದ್ದಾರೆ.

ಈ ವರ್ಷ ರಾಜ್ಯದ ಉತ್ತರ ಭಾಗದಲ್ಲಿ ಮೂರು ಬಾರಿ ಪ್ರವಾಹ ಪರಿಸ್ಥಿತಿ ಉಂಟಾಗಿದೆ. ಇದರಿಂದಾಗಿ ಸುಮಾರು 35 ಸಾವಿರ ಕೋಟಿ ರೂ. ನಷ್ಟವಾಗಿದೆ ಎಂದು ಅಂದಾಜಿಸಲಾಗಿದೆ.

ಜೆಡಿಎಸ್ ನಾಯಕ ಹಾಗೂ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರನ್ನು ಭೇಟಿ ಮಾಡಿದ್ದರ ಕುರಿತ ಪ್ರಶ್ನೆಗೆ ಉತ್ತರಿಸಿರುವ ಅವರು, ಮಂಡ್ಯದ ಜಿಲ್ಲಾ ಸಹಕಾರಿ ಬ್ಯಾಂಕ್ ಕುರಿತು ಚರ್ಚಿಸಿದ್ದಾಗಿ ತಿಳಿಸಿದ್ದಾರೆ. ಮಂಡ್ಯದ ಸಹಕಾರಿ ಬ್ಯಾಂಕ್ (7ನೇ ಪುಟಕ್ಕೆ)

## 125 ಕೋಟಿ ಅನುದಾನ ಹೊಸದೇನು ಅಲ್ಲ

### ಪ್ರಚಾರಕ್ಕಾಗಿ ಬಿಜೆಪಿ ಹೇಳಿಕೆ: ಕಾಂಗ್ರೆಸ್ ಸದಸ್ಯರ ಖಂಡನೆ

ದಾವಣಗೆರೆ, ನ.14- ಪ್ರತಿ ಮೂರು ವರ್ಷಕ್ಕೊಮ್ಮೆ ಮಹಾತ್ಮಗಾಂಧಿ ನಗರ ವಿಕಾಸ ಯೋಜನೆಯಡಿ ಬರುವ ಅನುದಾನವನ್ನೇ ಹೊಸದಾಗಿ ತಂದಂತೆ ಬಿಜೆಪಿ ನಾಯಕರು ಬಿಂಬಿಸಿ ಪ್ರಚಾರಕ್ಕೆ ಬಳಕೆ ಮಾಡಿಕೊಂಡಿದ್ದಾರೆ ಎಂದು ಪಾಲಿಕೆ ವಿಪಕ್ಷ ಕಾಂಗ್ರೆಸ್ ನಾಯಕರು ಆರೋಪಿಸಿದ್ದಾರೆ.

ಪಾಲಿಕೆ ವಿಪಕ್ಷ ಸದಸ್ಯ ಎ.ನಾಗರಾಜ್ ಪತ್ರಿಕಾಗೋಷ್ಠಿಯಲ್ಲಿಂದು ಮಾತನಾಡುತ್ತಾ, ಜಿಲ್ಲೆಯ ಸಂಸದರು, ಬಿಜೆಪಿ ಶಾಸಕರು ಹಾಗೂ ಮೇಯರ್ ನೇತೃತ್ವದ ನಿಯೋಗ ತೆರಳಿ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಒಂದು ಗಂಟೆ ಚರ್ಚಿಸಿ, ಯಾವ ವಿಶೇಷ ಅನುದಾನವನ್ನೂ ತಂದಿಲ್ಲ ಎಂದು ಹೇಳಿದರು.

2008ರಿಂದ ಇಲ್ಲಿಯವರೆಗೆ ಪ್ರತಿ 3 ವರ್ಷಕ್ಕೊಮ್ಮೆ ರಾಜ್ಯದ ಎಲ್ಲಾ ಮಹಾನಗರ ಪಾಲಿಕೆಗಳಿಗೆ ಪ್ರಥಮವಾಗಿ 100 ಕೋಟಿ ಹಾಗೂ ನಂತರದ ದಿನಗಳಲ್ಲಿ 125 ಕೋಟಿ ರೂ. ಅನುದಾನ ಬಿಡುಗಡೆ ಮಾಡಲಾಗುತ್ತಿದ್ದು, ಅದೇ ಹಣ ದಾವಣಗೆರೆ ಪಾಲಿಕೆಗೂ ಬಂದಿದೆ ಎಂದರು.

2019-20ರಲ್ಲಿ ಹೆಚ್.ಡಿ. ಕುಮಾರ ಸ್ವಾಮಿ ಮುಖ್ಯಮಂತ್ರಿಯಾಗಿದ್ದ ವೇಳೆ ಬಜೆಟ್‌ನಲ್ಲಿ ಅನುದಾನ ಬಿಡುಗಡೆ ಸಂಬಂಧ ಪ್ರಸ್ತಾವನೆ ಸಲ್ಲಿಸಿ ಸದನದ ಒಪ್ಪಿಗೆ ಪಡೆದಿದ್ದರು. ನಂತರ ನಗರಾಭಿವೃದ್ಧಿ ಇಲಾಖೆಯಿಂದ ದಾವಣಗೆರೆ ಮ ಹಾನಗರ ಪಾಲಿಕೆಗೆ 125 ಕೋಟಿ ರೂ.ಗಳ ಕ್ರಿಯಾಯೋಜನೆ ತಯಾರಿಸುವಂತೆ ಸೂಚಿಸಲಾಗಿತ್ತು. ಆದರೆ, ಜಿಲ್ಲಾ ಸಚಿವರುಗಳ ಬದಲಾವಣೆಯಿಂದಾಗಿ 3 ಬಾರಿ ಸಭೆ ನಡೆಸಿದರೂ ಕ್ರಿಯಾ ಯೋಜನೆಗೆ ಒಪ್ಪಿಗೆ ಸಿಕ್ಕಿರಲಿಲ್ಲ. ನಂತರ ಕ್ರಿಯಾ ಯೋಜನೆ ಬದಲಾಯಿಸಿ ಕಾಂಗ್ರೆಸ್ ಪಕ್ಷ ಗೆದ್ದ ವಾರ್ಡ್‌ಗಳಿಗೆ ತಾರತಮ್ಯ ಮಾಡಿ ಕ್ರಿಯಾ ಯೋಜನೆಗೆ ಒಪ್ಪಿಗೆ ಪಡೆದು ನಗರಾಭಿವೃದ್ಧಿ ಇಲಾಖೆಗೆ ಕಳುಹಿಸಲಾಗಿದೆ. ಶೀಘ್ರ ಅನುದಾನವನ್ನು ಎಲ್ಲಾ ವಾರ್ಡುಗಳಿಗೆ ಸಮಾನವಾಗಿ ಹಂಚಿಕೆ ಮಾಡಬೇಕೆಂದು ಆಗ್ರಹಿಸಿದರು.

ಈ ಹಿಂದೆ ಎಸ್.ಎಂ. ಕೃಷ್ಣ ಸರ್ಕಾರದ ಅವಧಿಯಲ್ಲಿ ಎಸ್.ಎಸ್. ಮಲ್ಲಿಕಾರ್ಜುನ್ ಅವರು ವಿಶೇಷ ಅನುದಾನ ತಂದಿದ್ದರು. ಹಾಗೆಯೇ ದಕ್ಷಿಣ (7ನೇ ಪುಟಕ್ಕೆ)

## ಹೊರ ವಲಯದ ರಿಂಗ್ ರಸ್ತೆಯ ಜಾಗದಲ್ಲಿ ಸಭಾಭವನ

# ಅಕ್ರಮ ಕಟ್ಟಡ ತೆರವುಗೊಳಿಸಿದ ದೂಡಾ

ದಾವಣಗೆರೆ, ನ. 14- ನಗರದ ಹೊರ ವಲಯದ ರಿಂಗ್ ರಸ್ತೆಗೆ ಯೋಜಿಸಲಾಗಿದ್ದ ಜಾಗದಲ್ಲಿ ಅಕ್ರಮವಾಗಿ ಕಟ್ಟಿಕೊಂಡಿದ್ದ ಸಭಾಭವನದ ಕಟ್ಟಡವನ್ನು ಶನಿವಾರ ದೂಡಾ ವತಿಯಿಂದ ತೆರವುಗೊಳಿಸಲಾಗಿದೆ.

ದೊಡ್ಡಬಾತಿಯ ಸರ್ವೇ ನಂ. 144ರಲ್ಲಿ ಪಿ.ಬಿ. ರಸ್ತೆಗೆ ಹೊಂದಿಕೊಂಡಂತೆ ನಿರ್ಮಿಸಲಾಗಿರುವ ಎ.ಕೆ.ಎಸ್. ಕನ್ವೆನ್ಷನ್ ಹಾಲ್‌ನ ಒಂದು ಭಾಗವು ಇನ್ನೂ ಅಭಿವೃದ್ಧಿ ಪಡಿಸಬೇಕಾದ ಹೊರ ವಲಯ ರಿಂಗ್ ರಸ್ತೆಯ ಜಾಗದಲ್ಲಿತ್ತು.

ದೂಡಾ ಅನುಮತಿ ಪಡೆಯದೇ ಈ ಕಟ್ಟಡ ನಿರ್ಮಾಣ ಮಾಡಿದ್ದನ್ನು ಗಮನಿಸಿದ ದೂಡಾ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ಅಕ್ರಮವಾಗಿರುವ ಕಟ್ಟಡ ತೆರವುಗೊಳಿಸಲು ಕ್ರಮ ತೆಗೆದುಕೊಂಡಿದ್ದಾರೆ. ಶನಿವಾರದಂದು ಕಟ್ಟಡದ ಗೋಡೆಯನ್ನು ಜೆ.ಸಿ.ಬಿ. ಮೂಲಕ ತೆರವುಗೊಳಿಸಲಾಯಿತು.

ಈ ಸಂಬಂಧ ಪತ್ರಿಕೆಯೊಂದಿಗೆ ಮಾತನಾಡಿ ರುವ ಶಿವಕುಮಾರ್, ಕಟ್ಟಡದ ಮಾಲೀಕರ ಗಮನಕ್ಕೆ ಉಲ್ಲಂಘನೆಯ ವಿಷಯ ತಂದಾಗ ಅವರು ಸ್ವಯಂ ಪ್ರೇರಿತವಾಗಿ ಕಟ್ಟಡ ತೆರವುಗೊಳಿಸಿಕೊಂಡಿದ್ದಾರೆ ಎಂದು ಹೇಳಿದರು.

ನಗರದಲ್ಲಿ ಈಗಾಗಲೇ ಒಳ ವರ್ತುಲ ರಸ್ತೆಯನ್ನು ನಿರ್ಮಿಸಲಾಗಿದೆ. 120 ಅಡಿಗಳ ಹೊರ ವರ್ತುಲ ರಸ್ತೆಗಾಗಿ 320 ಕೋಟಿ ರೂ.ಗಳ ಪ್ರಸ್ತಾವನೆ (7ನೇ ಪುಟಕ್ಕೆ)



## 320 ಕೋಟಿ ರೂ.ಗಳ ರಿಂಗ್ ರಸ್ತೆ ಪ್ರಸ್ತಾವನೆ



ರಿಂಗ್ ರೋಡ್ ನಿರ್ಮಾಣಕ್ಕಾಗಿ 320 ಕೋಟಿ ರೂ.ಗಳನ್ನು ಬಿಡುಗಡೆ ಮಾಡುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಕಳಿಸಲಾಗಿದೆ ಎಂದು ದೂಡಾ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್ ತಿಳಿಸಿದ್ದಾರೆ.

ಬೈಪಾಸ್ ಮೂಲಕ ಯರಗುಂಟೆ ಗ್ರಾಮಕ್ಕೆ ತಲುಪಿ ಅಲ್ಲಿಂದ ಆಶ್ರಯ ಬಡಾವಣೆ, ಮಂಡಕ್ಕಿ ಭಟ್ಟಿ ದಾಟಿ ಜಗಳೂರು ರಸ್ತೆಯ ಮೂಲಕ ಬೈಪಾಸ್‌ಗೆ ತಲುಪುವುದು ಹೊರ ವಲಯದ ರಿಂಗ್ ರಸ್ತೆ ಯೋಜನೆಯಾಗಿದೆ.

ಇದಕ್ಕಾಗಿ ಆವರಗೆರೆ, ಚಿಕ್ಕನಹಳ್ಳಿ, ಆನೆಕೊಂಡ, ಬೇತೂರು, ಯರಗುಂಟೆ, ಕರೂರು, ದೊಡ್ಡಬಾತಿ ಹಾಗೂ ಕುಂದುವಾಡಗಳಲ್ಲಿ ಒಟ್ಟು 134 ಎಕರೆ ಜಮೀನು ವಶಪಡಿಸಿಕೊಳ್ಳುವ ಅಗತ್ಯವಿದೆ. ಇದಕ್ಕಾಗಿ 107 ಕೋಟಿ ರೂ.ಗಳ ಅಂದಾಜು ರೂಪಿಸಲಾಗಿದೆ.

ರಸ್ತೆ ನಿರ್ಮಾಣಕ್ಕಾಗಿ 212 ಕೋಟಿ ರೂ.ಗಳು ಬೇಕಾಗುವ ಅಂದಾಜಿದೆ. ಒಟ್ಟಾರೆ 320 ಕೋಟಿ ರೂ.ಗಳ ಪ್ರಸ್ತಾವನೆಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ಅನುಮತಿಯ ನಿರೀಕ್ಷೆಯಲ್ಲಿದ್ದೇವೆ ಎಂದವರು ಹೇಳಿದ್ದಾರೆ. (7ನೇ ಪುಟಕ್ಕೆ)

# ನಗರದಲ್ಲಿ ನಿಷೇಧಿತ ಪಟಾಕಿಗಳ ವಶ

ದಾವಣಗೆರೆ, ನ.14- ಈ ವರ್ಷದ ಬೆಳಕಿನ ಹಬ್ಬ ದೀಪಾವಳಿಗೆ ಸಾರ್ವಜನಿಕರ ಆರೋಗ್ಯದ ಹಿತದೃಷ್ಠಿಯಿಂದ ಸರ್ಕಾರ ಹಸಿರು ಪಟಾಕಿಗೆ ಸಮ್ಮತಿ ಸೂಚಿಸಿತ್ತಾದರೂ ಹಸಿರು ಪಟಾಕಿ ಜೊತೆಗೆ ನಿಷೇಧಿತ ಪಟಾಕಿಯನ್ನೂ ಸಹ ಮಾರಾಟ ಮಾಡುತ್ತಿರುವ ಹಿನ್ನೆಲೆಯಲ್ಲಿ ನಗರದಲ್ಲಿ ಇಂದು ದಾಳಿ ಕಾರ್ಯಾಚರಣೆ ನಡೆಸಲಾಯಿತು.

ಹೈಸ್ಕೂಲ್ ಮೈದಾನದಲ್ಲಿ ತಾತ್ಕಾಲಿಕವಾಗಿ ಸುಮಾರು 42 ಪಟಾಕಿ ಮಳಿಗೆಗಳಲ್ಲಿ ಪಟಾಕಿ ವ್ಯಾಪಾರ-ವಹಿವಾಟು ಬೆಳಿಗ್ಗೆಯಿಂದ ನಡೆಯುತ್ತಿತ್ತು.

ಸಂಜೆ ವೇಳೆಗೆ ನಗರ ಪಾಲಿಕೆಯ ಆರೋಗ್ಯ ಮತ್ತು ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳು, ಪೊಲೀಸ್ ಇಲಾಖೆ ಸೇರಿ ನಿಷೇಧಿತ ಪಟಾಕಿ ಮಾರಾಟವಾಗುತ್ತಿದ್ದ ಮಳಿಗೆಗಳ ಮೇಲೆ ಜಂಟಿ ದಾಳಿ ಕಾರ್ಯಾಚರಣೆ ನಡೆಸಿ ಹಸಿರು ಪಟಾಕಿ ಹೊರತುಪಡಿಸಿ ನಿಷೇಧಿತ ಪಟಾಕಿಗಳ ಬಾಕ್ಸ್ ಗಳನ್ನು ವಶಪಡಿಸಿಕೊಳ್ಳಲಾಯಿತು.

ಸುಮಾರು 30 ಅಧಿಕ ಅಂಗಡಿಗಳ ಮೇಲೆ ಪರಿಸರ ಮಾಲಿನ್ಯ ಅಧಿಕಾರಿ ಸುನೀಲ್ ನೇತೃತ್ವದಲ್ಲಿ ಹಾಗೂ ಡಿವೈಎಸ್ಪಿ ನಾಗೇಶ್ ಐತಾಳ್ ಮತ್ತು ಅಗ್ನಿಶಾಮಕ ಅಧಿಕಾರಿ ಬಸವಪ್ರಭು ಶರ್ಮ ಸಹಭಾಗಿತ್ವದಲ್ಲಿ ದಾಳಿ ಮಾಡಲಾಯಿತು.

ಈ ವೇಳೆ ಹಸಿರು ಪಟಾಕಿಯಲ್ಲದೆ, ನಿಷೇಧಿತ ಪಟಾಕಿ ಸಹ ಇರುವುದು ಕಂಡು ಬಂದಾಗ ಕೆಲ ಕಾಲ ಕೆಲ ಅಂಗಡಿಗನ್ನು ಬಂದ್ ಮಾಡಿಸಿ ನಿಷೇಧಿತ ಪಟಾಕಿಗಳನ್ನು ಬಾಕ್ಸ್‌ಗಳಲ್ಲಿ ಹಾಕಿ ನಗರ ಪಾಲಿಕೆಯ ಕಸ ತುಂಬುವ 4 ವಾಹನಗಳಲ್ಲಿ ತುಂಬಿ ಸಾಗಿಸಲಾಯಿತು. ಈ ವೇಳೆ ಅಂಗಡಿ ಮಾಲೀಕರು ಅಧಿಕಾರಿಗಳೊಂದಿಗೆ ವಾಗ್ವಾದಕ್ಕೆ ಇಳಿದ ವೇಳೆ ಪೊಲೀಸರು ಅವರನ್ನು ನಿಯಂತ್ರಣ ಮಾಡಿದರು.




ಸರ್ಕಾರ ಹಾಗೂ ಹೈಕೋರ್ಟ್ ಆದೇಶದಂತೆ ಹಸಿರು ಪಟಾಕಿಗಳನ್ನು ಮಾತ್ರ ಮಾರಾಟ ಮಾಡಬೇಕು ಎಂದು ಆದೇಶ ಮಾಡಿದ್ದರು. ನಿಷೇಧಿತ ಪಟಾಕಿ ಮಾರಾಟವಾಗುತ್ತಿದೆ ಎಂಬ ಮಾಹಿತಿ ಮೇರೆಗೆ ದಾಳಿ ಮಾಡಿರುವುದಾಗಿ ಮನವರಿಕೆ ಮಾಡಿದರು.

ಸರ್ಕಾರವು 2-3 ತಿಂಗಳ ಮುಂಚೆಯೇ ಪಟಾಕಿ ನಿಷೇಧಿಸಬೇಕಿತ್ತು. ಅಲ್ಲದೇ ಪಟಾಕಿ ವಿಚಾರವಾಗಿ ನಮಗೆ ಸೂಚಿಸಿದ್ದರೆ ನಾವು ಪಟಾಕಿಗಳ ತರಿಸುತ್ತಿರಲಿಲ್ಲ. ಇದೀಗ ನಷ್ಟ ಅನುಭವಿಸಬೇಕೆಂಬುದು ಪಟಾಕಿ ಮಾಲೀಕರ ಅಳಲಾಗಿದೆ.

ಪಟಾಕಿ ಮಾರಾಟದ ಸ್ಥಳಕ್ಕಾಗಮಿಸಿದ ಪಾಲಿಕೆ ಆಯುಕ್ತ ವಿಶ್ವನಾಥ್ ಮುದಜ್ಜಿ ಪರಿಶೀಲಿಸಿ, ನಂತರ ತಮ್ಮನ್ನು ಭೇಟಿ ಮಾಡಿದ ಪತ್ರಕರ್ತರೊಂದಿಗೆ ಮಾತನಾಡುತ್ತಾ, ಹಸಿರು ಪಟಾಕಿಗೆ ಮಾತ್ರ ಅವಕಾಶವಿರುವುದಾಗಿ ಸರ್ಕಾರದ ಸುತ್ತೋಲೆ ಇದ್ದು, ಅದರ ಜವಾಬ್ದಾರಿಯನ್ನು ನಗರ ಪಾಲಿಕೆ ಮತ್ತು ಪೊಲೀಸ್ ಇಲಾಖೆಗೆ ವಹಿಸಿದೆ. ಹಾಗಾಗಿ ಪರಿಶೀಲನೆ ನಡೆಸಿ, ನಿಷೇಧಿತ ಪಟಾಕಿಗಳನ್ನು ವಶಪಡಿಸಿಕೊಳ್ಳುತ್ತಿರುವುದಾಗಿ ತಿಳಿಸಿದರು.

**ದಾಳಿ ನಡುವೆಯೂ ವ್ಯಾಪಾರ ಜೋರು:** ಇತ್ತ ದಾಳಿ ನಡೆಯುತ್ತಿದ್ದರೆ ಹಬ್ಬದ ಸಂಭ್ರಮದಲ್ಲಿರುವ ಜನರು ತಮ್ಮ ಮಕ್ಕಳ ಸಹಿತ ಪಟಾಕಿ ಅಂಗಡಿಗಳಿಗೆ ಮುಗಿಬಿದ್ದು ಪಟಾಕಿ ಖರೀದಿಯಲ್ಲಿ ನಿರತರಾಗಿದ್ದು, ಪಟಾಕಿ ಖರೀದಿಸಿ ಸಾಗಿದ್ದು ಕಂಡು ಬಂತು.



ದೀಪಾವಳಿ ಹಬ್ಬದ ಶುಭಾಶಯಗಳು
ಅಂತರಂಗದ ಬೆಳಕು ನಮ್ಮ ಬದುಕಿಗೆ ದಾರಿಯಾದರೆ,
ಬಹಿರಂಗದ ಬೆಳಕು ಜಗತ್ತನ್ನು ಕಾಣಲು ನೆರವಾಗುತ್ತದೆ,
ಪ್ರತಿಯೊಬ್ಬರ ಬದುಕಿಗೂ ಬೆಳಕೇ ಆಧಾರ,
ಬೆಳಕೆಂದರೆ ಜ್ಞಾನ, ಅರಿವು, ದೈವ,
ಇದೇ ದೀಪಾವಳಿಯ ಸಾರ.
ಬೆಳಕಿನ ಹಬ್ಬ ದೀಪಾವಳಿ
ಸರ್ವರ ಬಾಳಲ್ಲಿ
ಸುಖ, ಶಾಂತಿ, ನೆಮ್ಮದಿ, ಸಮೃದ್ಧಿ ತರಲಿ.
ಪ್ರಜ್ವಲಿಸುವ ಪ್ರತಿಯೊಂದು ದೀಪವು
ಸರ್ವರನ್ನೂ ಸಂತೃಪ್ತಿಯತ್ತ ಕೊಂಡೊಯ್ಯಲಿ.
ಜಗತ್ತನ್ನೇ ಕಾಡುತ್ತಿರುವ
ಕೊರೋನಾ ತೊಲಗಲಿ,
ಎಲ್ಲರ ಮನೆ ಮನಗಳು ಬೆಳಗಲಿ.
ಅಸತೋಮ ಸದ್ಗಮಯ
ತಮಸೋಮಾ ಜ್ಯೋತಿರ್ಗಮಯ
ನಾಡಿನ ಸಮಸ್ತ ಜನತೆಗೆ
ದೀಪಾವಳಿ ಹಬ್ಬದ ಹಾರ್ದಿಕ
ಶುಭಾಶಯಗಳು
ಜಿ.ಎಂ.ಸಿದ್ದೇಶ್ವರ
ಲೋಕಸಭಾ ಸದಸ್ಯರು ಹಾಗೂ
ಮಾಜಿ ಕೇಂದ್ರ ಸಚಿವರು
ದಾವಣಗೆರೆ ಲೋಕಸಭಾ ಕ್ಷೇತ್ರ.

# ಬ್ಯಾಂಕುಗಳಲ್ಲಿ ಕನ್ನಡ ಬಳಸುವ ಬದ್ಧತೆ ಬೇಕಿದೆ

**ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಹಮ್ಮಿಕೊಂಡಿರುವ ಕನ್ನಡ ನುಡಿ ಹಬ್ಬದ 11ನೇ ದಿನದ ಕಾರ್ಯಕ್ರಮದಲ್ಲಿ 'ಬ್ಯಾಂಕುಗಳಲ್ಲಿ ಕನ್ನಡ' ವಿಷಯ ಕುರಿತು ಉಪನ್ಯಾಸ ನೀಡಿದ ಎನ್.ಟಿ. ಯರ್ರಿಸ್ವಾಮಿ**



ದಾವಣಗೆರೆ, ನ.14- ಬ್ಯಾಂಕ್ ಸಿಬ್ಬಂದಿಗಳು ಹಾಗೂ ಗ್ರಾಹಕ ಇಬ್ಬರಲ್ಲೂ ಕನ್ನಡ ಬಳಸುವ ಬದ್ಧತೆ ಇದ್ದಾಗ ಮಾತ್ರ ಬ್ಯಾಂಕುಗಳಲ್ಲಿ ಕನ್ನಡ ಸಾರ್ವಭೌಮತ್ವ ಸಾಧಿಸಲ ಸಾಧ್ಯ ಎಂದು ಲೀಡ್ ಬ್ಯಾಂಕ್ ವಿಶ್ರಾಂತ ವಿಭಾಗೀಯ ಪ್ರಬಂಧಕ ಎನ್.ಟಿ. ಯರ್ರಿಸ್ವಾಮಿ ಅಭಿಪ್ರಾಯಿಸಿದರು.

ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು 65ನೇ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಹಮ್ಮಿಕೊಂಡಿರುವ ಕನ್ನಡ ನುಡಿ ಹಬ್ಬದ 11ನೇ ದಿನದ ಕಾರ್ಯಕ್ರಮದಲ್ಲಿ ಅವರು 'ಬ್ಯಾಂಕುಗಳಲ್ಲಿ ಕನ್ನಡ' ವಿಷಯ ಕುರಿತು ಅವರು ಉಪನ್ಯಾಸ ನೀಡಿದರು.

ಪ್ರಸ್ತುತ ಇರುವ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಅರ್ಧದಷ್ಟು ಬ್ಯಾಂಕುಗಳು ಕರ್ನಾಟಕದಲ್ಲಿಯೇ ಹುಟ್ಟಿಕೊಂಡಿವೆ. ಬಳ್ಳಾರಿಯಲ್ಲಿ ತುಂಗಭದ್ರಾ ಗ್ರಾಮೀಣ ಬ್ಯಾಂಕ್ ಆರಂಭವಾಗುವ ಮೂಲಕ ದೇಶದಲ್ಲಿಯೇ ಪ್ರಥಮವಾಗಿ ಗ್ರಾಮೀಣ ಬ್ಯಾಂಕ್ ಆರಂಭಿಸಿದ ಕೀರ್ತಿ ರಾಜ್ಯಕ್ಕೆ ಸಂದಿದೆ. ಅಲ್ಲದೆ ಅನೇಕ ಕಿರು ಹಣಕಾಸು ಸಂಸ್ಥೆಗಳೂ ರಾಜ್ಯದಲ್ಲಿ ಜನ್ಮತಾಳಿವೆ ಎಂದರು.

ಬ್ಯಾಂಕುಗಳ ಕ್ಷೇತ್ರದಲ್ಲಿ ಕರ್ನಾಟಕ ಹೇಗೆ ಸಾರ್ವಭೌಮತ್ವ ಸಾಧಿಸಿದೆಯೋ ಹಾಗೆಯೇ ಬ್ಯಾಂಕುಗಳಲ್ಲೂ ಸಹ ಕನ್ನಡ ಸಾರ್ವಭೌಮ ಭಾಷೆಯಾಗಿ ಮೆರೆಯಬೇಕಾಗಿರುವುದು ಅಗತ್ಯವಾಗಿದೆ ಎಂದು ಹೇಳಿದರು. ಬ್ಯಾಂಕುಗಳಲ್ಲಿ ಕನ್ನಡ ಬಳಸಲು ಯಾವುದೇ ಕಾನೂನಾತ್ಮಕ ಅಡೆ-ತಡೆಗಳಿಲ್ಲ. ಎಲ್ಲಾ ಸ್ಥಳೀಯ 22 ಭಾಷೆಗಳನ್ನೂ ಬ್ಯಾಂಕುಗಳಲ್ಲಿ ಬಳಸಬಹುದಾಗಿದೆ. ಆದರೆ ಬಳಸುವ ಬದ್ಧತೆ ಇಲ್ಲವಾಗಿದೆ ಎಂದರು.

ಆರಂಭದಲ್ಲಿ ಬ್ಯಾಂಕುಗಳಲ್ಲಿ ಕನ್ನಡವನ್ನು ಸುಲಲಿತವಾಗಿ, ವ್ಯವಸ್ಥಿತವಾಗಿ ಬಳಸಲಾಗುತ್ತಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಅನೇಕ ಕಾರಣಗಳಿಂದ ಬಳಕೆ ಕುಂಠಿತವಾಗಿದೆ. ಬ್ಯಾಂಕುಗಳ ಖಾಸಗೀಕರಣ, ಆಧುನೀಕರಣ, ಜಾಗತೀಕರಣದ ಫಲವಾಗಿ ಕನ್ನಡ ಬಳಕೆಗೆ ಹಿನ್ನಡೆಯಾಗಿದೆ ಎಂದು ಹೇಳಿದರು.

ಕಂಪ್ಯೂಟರ್‌ಗಳಲ್ಲಿನ ಭಾಷೆ ಕನ್ನಡವಾಗಿಲ್ಲ. ಆದ್ದರಿಂದ ಕನ್ನಡ ಬಳಸಲು ತನ್ನದೇ ಆದ ತಂತ್ರಾಂಶವನ್ನು ಬಳಸಿಕೊಂಡರೆ ಉತ್ತಮ ಎಂದು ಹೇಳಿದರು.

ಗ್ರಾಹಕರು ಎಟಿಎಂನಲ್ಲಿ ಹಣ ಪಡೆಯುವ ವೇಳೆ ಹಿಂದಿ, ಇಂಗ್ಲೀಷ್ ಜೊತೆ ಕನ್ನಡ ಭಾಷೆ ಆಯ್ದುಕೊಳ್ಳುವ ಅವಕಾಶವಿದ್ದರೂ ಶೇ.75ರಷ್ಟು ಜನರು ಕನ್ನಡ ಹೊರತಾದ ಭಾಷೆ ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ. ಯಂತ್ರಗಳಲ್ಲಿ ಕನ್ನಡ ಬಳಸುವ ಅರಿವು, ಬದ್ಧತೆ ಜನರಲ್ಲಿರಬೇಕು ಎಂದರು.

ತಾಲ್ಲೂಕು ಕಸಾಪ ಅಧ್ಯಕ್ಷ ಬಿ.ವಾಮದೇವಪ್ಪ ಅಧ್ಯಕ್ಷೀಯ ನುಡಿಗಳನ್ನಾಡಿದರು. ನಿರ್ದೇಶಕ ಕೆ. ರಾಘವೇಂದ್ರ ನಾಯರಿ ಸ್ವಾಗತಿಸಿದರು. ಅದಮ್ಯ ಕಲಾ ಸಂಸ್ಥೆಯವರು ನಾಡಗೀತೆ ಹಾಡಿದರು.

# ಶರಣ ಸಂಸ್ಕೃತಿ ಉಳಿಸಿ, ಬೆಳೆಸಲು ಬಕ್ಕಪ್ಪ ಕರೆ



ದಾವಣಗೆರೆ, ನ.14- 'ಅರಿದೊಡೆ ಶರಣ, ಮರೆದೊಡೆ ಮಾನವ' ಎನ್ನುವಂತಹ ಮಾತಿದೆ. ಶರಣರನ್ನು ಮರಣದಲ್ಲಿ ನೋಡು ಎನ್ನುವುದು ಶರಣ ವಿಶೇಷತೆಗೆ ಸಾಕ್ಷಿಯಾಗಿದೆ ಎಂದು ನಗರದ ಶ್ರೀ ಜಗದ್ಗುರು ಜಯವಿಭವ ವಿದ್ಯಾಸಂಸ್ಥೆಯ ಸಹ ಕಾರ್ಯದರ್ಶಿ ಎಂ.ಕೆ. ಬಕ್ಕಪ್ಪ ತಿಳಿಸಿದರು.

ದಾವಣಗೆರೆ ತಾಲ್ಲೂಕು ಕಸಾಪ ರಾಜ್ಯೋತ್ಸವದ ಪ್ರಯುಕ್ತ ಹಮ್ಮಿಕೊಂಡಿರುವ ಅಂತರ್ಜಾಲ ಕನ್ನಡ ನುಡಿಹಬ್ಬದ 9ನೇ ದಿನದ ಉಪನ್ಯಾಸ ಮಾಲಿಕೆಯಲ್ಲಿ 'ಶರಣ ಸಂಸ್ಕೃತಿ' ವಿಷಯ ಕುರಿತು ಅವರು ಮಾತನಾಡಿದರು.

'ಶರಣ' ಎಂದರೆ ಶಿವನಿಗೆ ಶರಣು ಹೋದವನು, ಭಕ್ತ, ಲಿಂಗವಂತ ಎಂದೆನ್ನಬಹುದು. ಶರಣರ ಕುರಿತು ಜಾನಪದರು ಶರಣಾರ ನೆನೆದರೆ ಸರಗೀಯ ಇಟ್ಟಂಗೆ, ಹರಗವಲ್ಲಿಗೆ ಮೂಡಿದಂಗೆ, ಕಲ್ಯಾಣದ ಶರಣಾರ ನೆನೆಯೋ ನನ ಮನವೇ ಎಂದು ಶರಣರ ಹಿರಿಮೆ, ಗರಿಮೆ ಯನ್ನು ಜನಪದರು ಕೊಂಡಾಡಿದ್ದಾರೆ ಎಂದು ನೆನಪಿಸಿದರು.

ಶರಣ ಸಂಸ್ಕೃತಿ ಎಂದರೆ ಕಾಯಕ ದಾಸೋಹದ ಸಂಸ್ಕೃತಿ. ನಾವು ಶರಣರನ್ನು ಗುರುತಿಸುವುದು ಅವರ ಕಾಯಕದಿಂದಲೇ. ಉದಾಹರಣೆಗೆ ಅಂಬಿಗರ ಚೌಡಯ್ಯ, ಡೋಹರ ಕಕ್ಕಯ್ಯ, ಮಾದಾರ ಚೆನ್ನಯ್ಯ, ಮಡಿವಾಳ ಮಾಚಯ್ಯ ಹೀಗೆ ಅವರ ಕಾಯಕದಿಂದಲೇ ಗುರುತಿಸುತ್ತೇವೆ. ಶರಣ ಸಂಸ್ಕೃತಿ ಕಾಯಕ ಪ್ರಧಾನವಾದಂತಹ ಸಂಸ್ಕೃತಿ. ಕಾಯಕದಲ್ಲಿ ನಿರತನಾದಡೆ ಗುರುವಾದರೂ ಮರೆಯಬೇಕು ಲಿಂಗವಾದರೂ ಮರೆಯಬೇಕು, ಜಂಗಮದ ಹಂಗನ್ನೂ ತೊರೆಯಬೇಕು. ಸತ್ಯಶುದ್ಧ ಕಾಯಕದಿಂದ ಮಾಡಿರುವಂತಹ ಕಾಯಕವು ಶಿವನಿಗೆ ಅರ್ಪಣೆ ಮಾಡುತ್ತದೆ ಎಂಬುವುದು ಶರಣ ಸಂಸ್ಕೃತಿ ಎಂದು ಹೇಳಿದರು.

ಇದರ ಜೊತೆಗೆ ದಾಸೋಹವೂ ಕೂಡ ಶರಣ ಸಂಸ್ಕೃತಿಯಲ್ಲಿ ಮೇಳೈಸಿಕೊಂಡಿದೆ. ಕರುಣೆ, ಅನುಕಂಪ, ಕಷ್ಟದಲ್ಲಿರುವವರ ಕಣ್ಣೀರು ಒರೆಸುವಂತಹ ಸಂಸ್ಕೃತಿಯೆಂದರೆ ಅದು ಶರಣ ಸಂಸ್ಕೃತಿಯಾಗಿದೆ ಎಂದು ಬಕ್ಕಪ್ಪ ಮಾರ್ಮಿಕವಾಗಿ ವಿವರಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ತಾಲ್ಲೂಕು ಕಸಾಪ ಅಧ್ಯಕ್ಷ ಬಿ. ವಾಮದೇವಪ್ಪ ಮಾತನಾಡಿ, 12ನೇ ಶತಮಾನದ ಶರಣರು ಅಂದು ಸಮಾಜದಲ್ಲಿ ಇದ್ದಂತಹ ಅಸಮಾನತೆ, ಅಸ್ಪೃಶ್ಯತೆ, ಜಾತಿಪದ್ಧತಿ, ಮೂಢನಂಬಿಕೆ, ಅಜ್ಞಾನ, ಇವುಗಳ ವಿರುದ್ಧ ಜನರಿಗೆ ಅರಿವು ಮೂಡಿಸುತ್ತಾ, 'ಇವನಾರವ ಇವನಾರವ ಎಂದೆನಿಸದೆ, ಇವ ನಮ್ಮವ ಇವ ನಮ್ಮವನೆಂದೆನಿಸಯ್ಯ' ಎನ್ನುವಂತೆ ಸರ್ವರೂ ಸಮಾನರು ಎಂಬುದನ್ನು ತಮ್ಮ ವಚನಗಳ ಮೂಲಕ ಸಮಾಜದಲ್ಲಿ ಕ್ರಾಂತಿಯನ್ನುಂಟು ಮಾಡಿದರು ಎಂದು ತಿಳಿಸಿದರು.

ಸಪ್ತಸ್ವರ ಸಂಗೀತ ತಂಡದ ಮುಖಂಡರಾದ ಸಂಗೀತ ಮಾಸ್ಟರ್ ರೇವಣಸಿದ್ದಪ್ಪ ಮತ್ತು ಅವರ ತಂಡದವರು ಸುಗಮ ಸಂಗೀತ ಕಾರ್ಯಕ್ರಮವನ್ನು ನಡೆಸಿಕೊಟ್ಟರು.

## ತಲೆ ಚಚ್ಚಿಕೊಂಡಿದ್ದ ಮಗಳು

(5ನೇ ಪುಟದಿಂದ) ಕೊಡುಗೆಗಳನ್ನು ಕಳಿಸಿದ್ದಾರೆ. ತಂದೆಯನ್ನು ಪೊಲೀಸರು ಬಂಧಿಸಿದಾಗ, ಬಿಡುಗಡೆ ಮಾಡುವಂತೆ ಅಪ್ರಾಪ್ತ ಪುತ್ರಿ ತನ್ನ ತಲೆಯನ್ನು ಪೊಲೀಸ್ ವ್ಯಾನ್‌ಗೆ ಚಚ್ಚಿಕೊಳ್ಳುತ್ತಿದ್ದ ದೃಶ್ಯ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿತ್ತು.

ಬುಲಂದ್‌ಶಹರ್‌ನ ಖುರ್ಜಾ ಎಂಬಲ್ಲಿ ಈ ಘಟನೆ ನಡೆದಿತ್ತು. ನಂತರದಲ್ಲಿ ಮುಖ್ಯಮಂತ್ರಿ ಬಡ ವ್ಯಕ್ತಿಯ ಬಿಡುಗಡೆಗೆ ಕ್ರಮ ತೆಗೆದುಕೊಂಡಿದ್ದಾರೆ ಎಂದು ಮುಖ್ಯಮಂತ್ರಿಯ ಆಪ್ತರಾದ ಶಲಭ್ ಮಣಿ ತ್ರಿಪಾಠಿ ಹೇಳಿದ್ದಾರೆ.

ಖುಜ್ರಾತ ಮುಂಡಖೇಡಾ ರಸ್ತೆಯಲ್ಲಿ ಶುಕ್ರವಾರ ದಾಳಿ ನಡೆಸಿದ್ದ ಪೊಲೀಸರು, ಅಕ್ರಮವಾಗಿ ಪಟಾಕಿ ಮಾರುತ್ತಿದ್ದ ಕೆಲವರನ್ನು ಬಂಧಿಸಿದ್ದರು. ಬಂಧಿತರನ್ನು ಎಳೆದುಕೊಂಡು ಹೋಗುವಾಗ ಅಪ್ರಾಪ್ತ ಬಾಲಕಿ ಬಂದು ತನ್ನ ತಂದೆಯನ್ನು ಬಿಡುಗಡೆ ಮಾಡುವಂತೆ ಗೋಳಾಡಿದ್ದಳು. ಹತಾಶೆಗೊಂಡ ಮಗಳು ಪೊಲೀಸ್ ವ್ಯಾನ್‌ಗೆ ಹಲವು ಬಾರಿ ತಲೆಯನ್ನೂ ಚಚ್ಚಿಕೊಂಡಿದ್ದಳು. ಆದರೆ, ಇದನ್ನು ಲೆಕ್ಕಿಸದ ಪೊಲೀಸರು, ಆಕೆಯನ್ನು ಎಳೆದು ಹಾಕಿ ಬಂಧಿತರನ್ನು ಕರೆದುಕೊಂಡು ಹೋಗಿದ್ದರು.

ಈ ವಿಡಿಯೋ ವೈರಲ್ ಆದ ನಂತರ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಬಂಧಿತರನ್ನು ಬಿಡುಗಡೆ ಮಾಡಲು ಆದೇಶ ಹೊರಡಿಸಿದ್ದಾರೆ. ಅಪ್ರಾಪ್ತೆಯ ಮನೆಗೆ ಸಿಹಿ ಹಾಗೂ ದೀಪಾವಳಿ ಕೊಡುಗೆ ರವಾನಿಸಲೂ ತಿಳಿಸಿದ್ದಾರೆ.

ಘಟನೆಯ ನಂತರ ಪೊಲೀಸ್ ವ್ಯವಸ್ಥೆ ಕ್ರಮ ಕೈಗೊಳ್ಳುವಾಗ ಮಾನವೀಯತೆ ತೋರದ ಕಾರಣಕ್ಕಾಗಿ ಪೇದೆ ಬ್ರಿಜವೀರ್ ಅವರನ್ನು ಪೊಲೀಸ್ ಲೈನ್ಸ್‌ಗೆ ವರ್ಗಾಯಿಸಲಾಗಿದೆ ಎಂದು ಬುಲಂದ್‌ಶಹರ್‌ನ ಹಿರಿಯ ಎಸ್‌ಪಿ ಸಂತೋಷ್ ಕುಮಾರ್ ಸಿಂಗ್ ತಿಳಿಸಿದ್ದಾರೆ.

## 320 ಕೋಟಿ ರೂ.ಗಳ ರಸ್ತೆ ಪ್ರಸ್ತಾವನೆ

(5ನೇ ಪುಟದಿಂದ) ರಿಂಗ್ ರಸ್ತೆಯ ಒಟ್ಟು ಉದ್ದ 27.80 ಕಿ.ಮೀ. ಆಗಿದೆ. ಈಗಾಗಲೇ 15 ಕಿ.ಮೀ. ಪ್ರದೇಶ ಅಭಿವೃದ್ಧಿಯಾಗಿದೆ. ಉಳಿದ 12.80 ಕಿ.ಮೀ. ಪ್ರದೇಶವನ್ನು ಅಭಿವೃದ್ಧಿ ಪಡಿಸಬೇಕಿದೆ ಎಂದರು.

## ಕಟ್ಟಡ ತೆರವುಗೊಳಿಸಿದ ದೂಡಾ

(5ನೇ ಪುಟದಿಂದ) ಕಳಿಸಲಾಗಿದೆ. ಈ ರಸ್ತೆ ಇನ್ನೂ ನಿರ್ಮಾಣವಾಗದೇ ಇದ್ದರೂ ಸಹ, ನಗರಾಭಿವೃದ್ಧಿ ಯೋಜನೆಯ ಭಾಗವಾಗಿರುತ್ತದೆ. ಇಲ್ಲಿ ಯಾವುದೇ ಕಟ್ಟಡವನ್ನು ನಿರ್ಮಾಣ ಮಾಡುವಂತಿಲ್ಲ ಎಂದವರು ವಿವರಿಸಿದ್ದಾರೆ. ಪ್ರಸಕ್ತ ಈ ಕಟ್ಟಡ ಹೊರತು ಪಡಿಸಿದರೆ ಬೀಡಿ ಲೇ-ಔಟ್‌ನಲ್ಲಿ ನಿಯಮ ಉಲ್ಲಂಘಿಸಿ ಪ್ರಸ್ತಾಪಿತ ರಿಂಗ್ ರಸ್ತೆಯ ಜಾಗದಲ್ಲಿ ಮನೆಗಳನ್ನು ಕಟ್ಟಿಕೊಳ್ಳಲಾಗಿದೆ. ಅವರಿಗೂ ಸಹ ಬೇರೆ ಜಾಗ ಕೊಟ್ಟು ಸ್ಥಳಾಂತರಿಸುವ ಪ್ರಯತ್ನ ನಡೆದಿದೆ ಎಂದು ಶಿವಕುಮಾರ್ ಹೇಳಿದ್ದಾರೆ.


ನಗರಾಭಿವೃದ್ಧಿ ಯೋಜನೆ ಉಲ್ಲಂಘಿಸಿ ಯಾವುದೇ ಕಟ್ಟಡ ನಿರ್ಮಿಸಿದರೂ ಅದು ಅಕ್ರಮವಾಗುತ್ತದೆ. ಹೀಗಾಗಿ ಕಟ್ಟಡ ನಿರ್ಮಾಣಕ್ಕೆ ಮುಂಚೆ ದೂಡಾ ಅನುಮತಿಯನ್ನು ಕಡ್ಡಾಯವಾಗಿ ಪಡೆದುಕೊಳ್ಳಬೇಕೆಂದು ಅವರು ಇದೇ ಸಂದರ್ಭದಲ್ಲಿ ತಿಳಿಸಿದ್ದಾರೆ. ಪಾರ್ಕ್ ಜಾಗಗಳೂ ಸೇರಿದಂತೆ ನಿಯಮ ಉಲ್ಲಂಘಿಸಿ ದೂಡಾ ಜಾಗದಲ್ಲಿ ಮನೆಗಳನ್ನು ಕಟ್ಟಿಕೊಂಡಿರುವುದು ಗಮನಕ್ಕೆ ಬಂದಿದೆ. ಅವುಗಳ ವಿರುದ್ಧ ಮುಂಬರುವ ದಿನಗಳಲ್ಲಿ ಕ್ರಮ ತೆಗೆದುಕೊಳ್ಳಲಾಗುವುದು ಎಂದವರು ಹೇಳಿದ್ದಾರೆ.

ಈ ಸಂದರ್ಭದಲ್ಲಿ ದೂಡಾ ಸದಸ್ಯರಾದ ಎಂ.ಎಂ. ದೇವೀರಮ್ಮ, ಸೌಭಾಗ್ಯಮ್ಮ, ಜಯರುದ್ರೇಶ್, ದೂಡಾ ಅಭಿಯಂತರರುಗಳಾದ ಕೆ. ಹೆಚ್. ಶ್ರೀಕರ್, ಸುಜಯ್ ಕುಮಾರ್, ಗುರುಸಿದ್ದಪ್ಪ ಮತ್ತಿತರರು ಉಪಸ್ಥಿತರಿದ್ದರು.

## ನಗರಕ್ಕೆ ನಾಳೆ ಸಚಿವ ಸೋಮಶೇಖರ

ದಾವಣಗೆರೆ, ನ. 14- ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಅವರು ನಾಡಿದ್ದು ದಿನಾಂಕ 16 ರ ಸೋಮವಾರ ನಗರಕ್ಕೆ ಆಗಮಿಸಲಿದ್ದಾರೆ.

ಸಚಿವರು ಸೋಮವಾರ ಬೆಳಿಗ್ಗೆ 6 ಗಂಟೆಗೆ ಬೆಂಗಳೂರಿನಿಂದ ಹೊರಟು, 9 ಗಂಟೆಗೆ ನಗರದ ಪ್ರವಾಸಿ ಮಂದಿರಕ್ಕೆ ಆಗಮಿಸುವರು. ಬೆಳಿಗ್ಗೆ 11 ಗಂಟೆಗೆ ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ ಏರ್ಪಡಿಸಲಾಗಿರುವ ಅಖಿಲ ಭಾರತ ಸಹಕಾರ ಸಪ್ತಾಹದ 'ಅಂತರ್ಜಾಲ ಸಂಪರ್ಕದ ಮೂಲಕ ಸಹಕಾರ ಶಿಕ್ಷಣ ತರಬೇತಿಯ ಪುನರ್‌ಮನನ' ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಧ್ಯಾಹ್ನ 2.30 ಕ್ಕೆ ನಗರದಿಂದ ನಿರ್ಗಮಿಸುವರು.

**'ಹರೀಶ್ ನ್ಯೂರೋ ಕ್ಲಿನಿಕ್' (Brain & Nerve Clinic)**

94802 25635

**ಸ್ಟ್ರೋಕ್ ತಡೆಗಟ್ಟುವುದು ಹಾಗೂ ಸ್ಟ್ರೋಕ್ ನಂತರದ ಚಿಕಿತ್ಸೆ**

**ಮೆದುಳು ಮತ್ತು ನರ ಸಂಬಂಧ ರೋಗ ಲಕ್ಷಣಗಳು :**

* ತಲೆನೋವು-ಮೈಗ್ರೇನ್ *ಟೆನ್ಷನ್ * ತಲೆನೋವು * ತಲೆಸುತ್ತು, ಕತ್ತು ಮತ್ತು ಸೊಂಟದ ನರ ಸೆಳೆತ * ಸ್ಟ್ರೋಕ್ (ಲಕ್ವ-ಪಾರ್ಶ್ವವಾಯು) * ಫಿಟ್ಸ್ (ಎಪಿಲೆಪ್ಸಿ-ಅಪಸ್ಮಾರ/ಮೂರ್ಛೆ ರೋಗ) * ಪ್ರಜ್ಞೆ ತಪ್ಪುವುದು* ದೃಷ್ಟಿಯಲ್ಲಿ ತೊಂದರೆ * ಮಾತು ತೊದಲುವುದು * ನಿದ್ರಾಹೀನತೆ * ಕೈಕಾಲು ನಡುಕ/ಸ್ವಾಧೀನ ಇಲ್ಲದಿರುವುದು * ಪಾರ್ಕಿನ್‌ಸನ್ ಕಾಯಿಲೆ ಮತ್ತು ಇತರೆ ಮೂವ್‌ಮೆಂಟ್ ಡಿಸಾರ್ಡರ್ * ಸ್ನಾಯು ಮತ್ತು ನರದೌರ್ಬಲ್ಯ* ಡಿಮೆಂಶಿಯಾ (ಮರೆವಿನ ಕಾಯಿಲೆ) ಮೆದುಳು ಜ್ವರ.

1) ಏಕಾಏಕಿ ಮೆದುಳಿನ ಯಾವುದೇ ಭಾಗಕ್ಕೆ ರಕ್ತ ಸಂಚಾರ ನಿಂತಾಗ ಸ್ಟ್ರೋಕ್ (ಲಕ್ವ) (ಪಾರ್ಶ್ವ ವಾಯು) ಉಂಟಾಗುತ್ತದೆ. ಸುಮಾರು ನಾಲ್ವರಲ್ಲಿ ಒಬ್ಬರಿಗೆ ಸ್ಟ್ರೋಕ್ ಉಂಟಾಗುವ ಸಾಧ್ಯತೆ ಇರುವುದು. ಆದ ಕಾರಣ ಸ್ಟ್ರೋಕ್ ಬಗ್ಗೆ ಸಂಕ್ಷಿಪ್ತ ಮಾಹಿತಿ ನರರೋಗ ತಜ್ಞ ಡಾ।। ಹರೀಶ್ ಎ.ಹೆಚ್. ನೀಡಿದ್ದಾರೆ.

**2) ಸ್ಟ್ರೋಕ್ ವಿಧಗಳು :** i) Infarct (ರಕ್ತ ಹೆಪ್ಪುಗಟ್ಟುವುದು) (80%) ii) Bleed (Haemorrhage) (20%) ರಕ್ತಸ್ರಾವ iii) TIA-Transient Ischaemic attack (ಸ್ಟ್ರೋಕ್‌ನ ಮುನ್ಸೂಚನೆಗಳು.

**3) ಲಕ್ಷಣಗಳು :** ಮಾತಿನಲ್ಲಿ ತೊದಲು, ದೃಷ್ಟಿಯಲ್ಲಿ ತೊಂದರೆ, ನಡೆದಾಡಲು ಆಗದಿರುವುದು (Balance), ತಲೆಸುತ್ತು, ವಾಂತಿ, ಕೆಲವೊಮ್ಮೆ ತೀವ್ರತರನಾದ ತಲೆನೋವು.

**4) ಸ್ಟ್ರೋಕ್‌ಗೆ ಕಾರಣಗಳು :** ಬಿಪಿ ಹೆಚ್ಚಿರುವುದು, ಮಧುಮೇಹ ನಿಯಂತ್ರಣದಲ್ಲಿರದಿರುವುದು, ಧೂಮಪಾನ, ಅತೀಯಾದ ಮದ್ಯಪಾನ, ತಂಬಾಕು ಅಗಿಯುವುದು. Cholesterol ಪ್ರಮಾಣ ಹೆಚ್ಚಾಗುವುದು.

**5) Infarct ನಲ್ಲಿನ ವಿವಿಧ ಗುಂಪುಗಳು :** i) Large Artery Stroke (ದೊಡ್ಡ ರಕ್ತನಾಳಗಳಲ್ಲಿನ ತೊಂದರೆ) ii) Lacunar Stroke iii) Cardfoembolic Stroke (ಹೃದಯದಲ್ಲಿನ ತೊಂದರೆಗಳಿಂದ ಉಂಟಾಗುವ ಸ್ಟ್ರೋಕ್) iv) Unclassified v) Cryptogenic ಸ್ಟ್ರೋಕ್ ಆದ 3 ರಿಂದ 4.30 ಗಂಟೆ ಒಳಗಾಗಿ stroke ready hospitalಗೆ ರೋಗಿಯನ್ನು ಸೇರಿಸಿ "Ivtpa ನೀಡಿದಲ್ಲಿ ಚೇತರಿಸಿಕೊಳ್ಳುವ ಸಾಧ್ಯತೆ ಹೆಚ್ಚು.

**6) ಚಿಕಿತ್ಸೆ :** ರಕ್ತ ಹೆಪ್ಪುಗಟ್ಟುವುದನ್ನು ತಡೆಲು ನೀಡಲಾಗುವ ಔಷಧಗಳು : Anti Platelets (Aspirin, Clopidogrel, Ticagrelor, Statins (ರಕ್ತದ ಕೊಬ್ಬಿನ ಅಂಶ ಕಡಿಮೆ ಮಾಡಲು), BP (130/80 mm hg), Sugar (120-160-160 mg%, Hb A1 C : 7-8%, Physio Therapy ದೈನಂದಿನ ಚಟುವಟಿಕೆಗಳಲ್ಲಿ ಸಕ್ರಿಯರಾಗಿರುವುದು. (walking out door games), ದುಷ್ಚಟಗಳಿಂದ ದೂರ ಇರುವುದು.

**- ಡಾ।। ಹರೀಶ್ ಎ.ಹೆಚ್.**

ಎಂ.ಬಿ.ಬಿ.ಎಸ್., ಎಂ.ಡಿ. (ಮೆಡಿಸಿನ್), ಡಿ.ಎಂ. (ನ್ಯೂರಾಲಜಿ) (ಮುಂಬೈ)

**ಮೆದುಳು, ಬೆನ್ನುಹುರಿ ಮತ್ತು ನರರೋಗ ತಜ್ಞರು, ದಾವಣಗೆರೆ.**

ಭಾನುವಾರ (ಬೆ. 8 ರಿಂದ ಮಧ್ಯಾಹ್ನ 1ರವರೆಗೆ) ಮತ್ತು ಮಂಗಳವಾರ (ಮಧ್ಯಾಹ್ನ 12 ರಿಂದ ಸಂಜೆ 6ರವರೆಗೆ ಲಭ್ಯವಿರುತ್ತಾರೆ)

**ಫೋ. : 94802 25635**

ವಿಳಾಸ : ವಿಶ್ವಾಸ್ ಸೂಪರ್ ಸ್ಪೆಷಾಲಿಟಿ ಹಾಸ್ಪಿಟಲ್, 1ನೇ ಮುಖ್ಯ ರಸ್ತೆ, ಲಕ್ಷ್ಮೀ ಫ್ಲೋರ್ ಮಿಲ್ ಹತ್ತಿರ, ನಿಜಲಿಂಗಪ್ಪ ಲೇ-ಔಟ್, ದಾವಣಗೆರೆ.

ADVT


## ಇನ್ನಷ್ಟು ನೆರವು ಚಾಲನೆ: ಸಿಎಂ

(5ನೇ ಪುಟದಿಂದ) ಕುರಿತು ಚರ್ಚಿಸಲು ಕುಮಾರಸ್ವಾಮಿ ನನ್ನ ಭೇಟಿ ಮಾಡಿದ್ದರು. ಇದನ್ನು ಬಿಟ್ಟರೆ ಬೇರೆ ಯಾವುದೇ ಕಾರಣಗಳಿಲ್ಲ ಎಂದು ಯಡಿಯೂರಪ್ಪ ಹೇಳಿದ್ದಾರೆ.

## ಎಸ್.ಎ.ಆರ್‌ಗೆ ಸಚಿವ ಸ್ಥಾನ ನೀಡಲು ಒತ್ತಾಯ

ದಾವಣಗೆರೆ, ನ.14- ಉತ್ತರ ವಿಧಾನಸಭಾ ಕ್ಷೇತ್ರದ ಶಾಸಕ ಎಸ್.ಎ. ರವೀದ್ರನಾಥ್ ಅವರಿಗೆ ಸಚಿವ ಸ್ಥಾನ ನೀಡಬೇಕೆಂದು ಬಿಜೆಪಿ ಲೀಗಲ್ ಅಂಡ್ ಲೆಜಿಸ್ಲೇಟಿವ್ ಸೆಲ್‌ನ ವಕೀಲರುಗಳಾದ ಹೆಚ್. ದಿವಾಕರ್, ಎ.ಸಿ. ರಾಘವೇಂದ್ರ, ಕೆ.ಹೆಚ್. ಧನಂಜಯ, ಮಂಜುನಾಥ್ ಅವರುಗಳು ಮುಖ್ಯಮಂತ್ರಿಗಳನ್ನು ಒತ್ತಾಯಿಸಿದ್ದಾರೆ.

# ರಾಜ್ಯ ಮಟ್ಟದ ಅಖಿಲ ಭಾರತ ಸಹಕಾರ ಸಪ್ತಾಹ

(5ನೇ ಪುಟದಿಂದ) ಎಂಬ ಧ್ಯೇಯ ವಾಕ್ಯದೊಂದಿಗೆ ಈ ಸಪ್ತಾಹ ಏರ್ಪಾಡಾಗಿದೆ ಎಂದು ದಾವಣಗೆರೆ - ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ಅಧ್ಯಕ್ಷರೂ ಆಗಿರುವ ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ಎನ್.ಎ. ಮುರುಗೇಶ್ ಅವರು ಇಂದಿಲ್ಲಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಸಮಾರಂಭವನ್ನು ಉದ್ಘಾಟಿಸುವರು. ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ. ಬಸವರಾಜ್ ಸಹಕಾರಿ ಧ್ವಜಾರೋಹಣವನ್ನು ನೆರವೇರಿಸುವರು. ಶಾಸಕ ಎಸ್.ಎ. ರವೀಂದ್ರನಾಥ್ ಅಧ್ಯಕ್ಷತೆ ವಹಿಸುವರು. ಮಾಜಿ ಸಚಿವ ಎಚ್.ಕೆ. ಪಾಟೀಲ್ ಅವರು ಸಹಕಾರ ವಾರಪತ್ರಿಕೆ ವಿಶೇಷ ಸಂಚಿಕೆ ಬಿಡುಗಡೆ ಮಾಡುವರು. ಶಾಸಕ ಶಾಮನೂರು ಶಿವಶಂಕರಪ್ಪ ಪಟ್ಟಣ ಬ್ಯಾಂಕ್‌ಗಳ ವಿಶೇಷ ಸಂಚಿಕೆ ಬಿಡುಗಡೆ ಮಾಡುವರು.

ಲೋಕಸಭಾ ಸದಸ್ಯ ಜಿ.ಎಂ. ಸಿದ್ದೇಶ್ವರ, ಶಾಸಕರುಗಳಾದ ಮಾಡಾಳ್ ವಿರುಪಾಕ್ಷಪ್ಪ, ಪ್ರೊ. ಲಿಂಗಣ್ಣ, ಎಸ್.ವಿ. ರಾಮಚಂದ್ರಪ್ಪ, ಎಂ.ಪಿ. ರೇಣುಕಾಚಾರ್ಯ, ಎಸ್. ರಾಮಪ್ಪ, ಜಿ.ಪಂ. ಅಧ್ಯಕ್ಷೆ ಶ್ರೀಮತಿ ದೀಪಾ ಜಗದೀಶ್, ಮಹಾಪೌರ ಬಿ.ಜಿ. ಅಜಯ್ ಕುಮಾರ್, ದೂಡಾ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್ ಮುಂತಾದ ಗಣ್ಯರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಅಂತರ್ಜಾಲ ಸಂಪರ್ಕದ ಮೂಲಕ ಸಹಕಾರ ಶಿಕ್ಷಣ-ತರಬೇತಿಯ ಪುನರ್‌ಮನನ ದಿನಾಚರಣೆ ನಡೆಯಲಿದೆ ಎಂದು ಮುರುಗೇಶ್ ಹೇಳಿದರು.

ನಾಳೆ ದಿನಾಂಕ 15ರ ಭಾನುವಾರ ಹರಿಹರದ ಟಿಎಪಿಸಿಎಂಎಸ್ ಆವರಣದಲ್ಲಿ ಸಹಕಾರಿ ಮಾರಾಟ, ಗ್ರಾಹಕ, ರೂಪಾಂತರ ಮತ್ತು ಮೌಲ್ಯವರ್ಧನೆ ವಿಷಯವಾಗಿ ನಡೆಯಲಿದೆ. ದಿನಾಂಕ 17ರ ಮಂಗಳವಾರ ನ್ಯಾಮತಿ ತಾಲ್ಲೂಕು ಸುರಹೊನ್ನೆ ಶಾಖೆಯ ಶಿವ ಕ್ರೆಡಿಟ್ ಕೋ ಆಪ್ ಸೊಸೈಟಿ ಆವರಣದಲ್ಲಿ ಸಹಕಾರ ಸಂಸ್ಥೆಗಳ ನಡುವೆ ಸಹಕಾರವನ್ನು ಬಲಪಡಿಸುವುದು ಎಂಬ ವಿಷಯ, ದಿನಾಂಕ 18ರ ಬುಧವಾರ ಜನತಾ ಬಜಾರ್ ಸಭಾಂಗಣದಲ್ಲಿ ವ್ಯವಹಾರ ಉದ್ಯೋಗ ಕಳೆದುಕೊಂಡವರು, ಬಾಧಿತರು ವಿಷಯವಾಗಿ, ದಿನಾಂಕ 19ರ ಗುರುವಾರ ಹೊನ್ನಾಳಿಯ ಟಿಎಪಿಸಿಎಂಎಸ್ ಆವರಣದಲ್ಲಿ ಯುವಜನ, ಮಹಿಳಾ ಮತ್ತು ಅಬಲ ವರ್ಗದವರಿಗಾಗಿ ಸಹಕಾರ ಸಂಸ್ಥೆಗಳು ವಿಷಯವಾಗಿ ಹಾಗೂ ದಿನಾಂಕ 20ರ ಶುಕ್ರವಾರ ಜಗಳೂರು ತಾಲ್ಲೂಕಿನ ಸಿದ್ದಿಹಳ್ಳಿಯಲ್ಲಿ ಸಹಕಾರ ಸಂಸ್ಥೆಗಳ ಮೂಲಕ ಆರ್ಥಿಕ ಸೇರ್ಪಡೆ, ಡಿಜಿಟಲೈಜೇಷನ್ ಮತ್ತು ಸಾಮಾಜಿಕ ಜಾಲತಾಣ ವಿಷಯವಾಗಿ ಸಪ್ತಾಹದ ಆಚರಣೆ ನಡೆಯಲಿದೆ.

ರಾಜ್ಯ ಸಹಕಾರ ಮಹಾ ಮಂಡಳ, ರಾಜ್ಯ ಸಹಕಾರ ಪಟ್ಟಣ ಬ್ಯಾಂಕ್‌ಗಳ ಮಹಾಮಂಡಳ, ರಾಜ್ಯ ಲ್ಯಾಂಪ್ಸ್ ಸಹಕಾರ ಮಂಡಳ, ಮೀನುಗಾರರ ಮಂಡಳ, ರಾಜ್ಯ ಸಹಕಾರಿ ಕೈಮಗ್ಗ ನೇಕಾರರ ಮಹಾ ಮಂಡಳ, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್, ಶಿವಮೊಗ್ಗ, ದಾವಣಗೆರೆ, ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಒಕ್ಕೂಟ ಶಿವಮೊಗ್ಗ, ಜಿಲ್ಲಾ ಸಹಕಾರ ಯೂನಿಯನ್, ಜಿಲ್ಲಾ ಸಹಕಾರ ಪಟ್ಟಣ ಬ್ಯಾಂಕ್‌ಗಳ ಒಕ್ಕೂಟ, ಜಿಲ್ಲೆಯ ಎಲ್ಲಾ ರೀತಿಯ ಸಹಕಾರ ಸಂಘಗಳ ಮತ್ತು ಎಲ್ಲಾ ರೀತಿಯ ಸೌಹಾರ್ದ ಸಹಕಾರಿ ಹಾಗೂ ಸಹಕಾರ ಇಲಾಖೆ ಇವರುಗಳ ಸಂಯುಕ್ತಾಶ್ರಯದಲ್ಲಿ ಈ ಕಾರ್ಯಕ್ರಮ ಆಯೋಜನೆಗೊಂಡಿದೆ.

ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಅಧ್ಯಕ್ಷ ಡಾ. ಜೆ.ಆರ್.ಷಣ್ಮುಖಪ್ಪ, ಸಹಕಾರ ಸಂಘಗಳ ಉಪನಿಬಂಧಕ ಬಿ.ಜಯಪ್ರಕಾಶ್, ಸಹಕಾರ ಸಂಘಗಳ ಉಪನಿರ್ದೇಶಕ ಕೆ.ಮಹೇಶ್ವರಪ್ಪ, ನಿರ್ದೇಶಕರಾದ ಶಿವಕುಮಾರ್, ರಾಜಣ್ಣ, ಮಾಲತೇಶ್, ತಾವರನಾಯ್ಕ ಮತ್ತಿತರರು ಪತ್ರಿಕಾ ಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

## ಅನುದಾನ ಹೊಸದೇನು ಅಲ್ಲ

(5ನೇ ಪುಟದಿಂದ) ವಲಯದ ಶಾಸಕ ಎಸ್ಸೆಸ್ ಅವರೊಂದಿಗೆ ನಿಯೋಗ ತೆರಳಿದ್ದರೆ ಮುಖ್ಯಮಂತ್ರಿಗಳು ವಿಶೇಷ ಅನುದಾನ ನೀಡುವ ಸಾಧ್ಯತೆ ಇತ್ತು ಎಂದು ಹೇಳಿದರು.

ಸಂಸದ ಸಿದ್ದೇಶ್ವರ ಅವರು ತಮ್ಮ ಅನುದಾನ ನೀಡಿ ಶಾಶ್ವತವಾಗಿ ಹೇಳಿಕೊಳ್ಳು ವಂತಹ ಯಾವ ಕೆಲಸವನ್ನೂ ಮಾಡಿಲ್ಲ ಎಂದು ನಾಗರಾಜ್ ಆರೋಪಿಸಿದರು.

**'ಮನೆ ಬಾಗಿಲಿಗೆ ಪಾಲಿಕೆ' - ಆಕ್ಷೇಪ:** ಪಾಲಿಕೆಯ ಎಲ್ಲಾ ಕಾರ್ಯಗಳು ಆನ್‌ಲೈನ್ ಆಗುತ್ತಿರುವ ವೇಳೆ ಮನೆ ಬಾಗಿಲಿಗೆ ಮಹಾನಗರ ಪಾಲಿಕೆ ಎಂಬ ಶೀರ್ಷಿಕೆಯ ಕಾರ್ಯಕ್ರಮಕ್ಕೆ ಅರ್ಥವಿಲ್ಲ. ವಾರ್ಡುಗಳಲ್ಲಿ ಕನಿಷ್ಠ 2 ಕೋಟಿ ರೂ.ಗಳ ಕೆಲಸಗಳು ಬಾಕಿ ಇವೆ. ಈ ಹಣ ಇಟ್ಟುಕೊಂಡು ಮಹಾಪೌರರು ವಾರ್ಡುಗಳಿಗೆ ಪ್ರವೇಶಿಸಿ, ಕೇವಲ ಪ್ರಚಾರಕ್ಕಾಗಿ ಬರುವುದಾದರೆ ಜನರಿಂದ ಛೀಮಾರಿ ಹಾಕಿಸಿಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದರು.

ಪಾಲಿಕೆ ಮೇಯರ್ ಅವರು ಮೊದಲು ಊರು ಸ್ವಚ್ಛ ಮಾಡಲಿ, ಸಮರ್ಪಕವಾಗಿ ನೀರು ಕೊಡಲಿ. ಯಾವುದೇ ಪೂರ್ವ ತಯಾರಿ ಇಲ್ಲದೆ ಇಂತಹ ನಿರ್ಧಾರ ತೆಗೆದುಕೊಳ್ಳುವುದು ಸೂಕ್ತವಲ್ಲ ಎಂದು.

**1 ಲಕ್ಷ ಸಸಿಗೆ ಜಾಗವೆಲ್ಲಿ?:** ಮೇಯರ್ 1 ಲಕ್ಷ ಸಸಿ ನೆಡುವ ಕಾರ್ಯಕ್ರಮ ಘೋಷಿಸಿದ್ದಾರೆ. ಮಳೆಗಾಲ ಮುಗಿದು ಬೇಸಿಗೆ ಆರಂಭವಾಗಿದೆ. ಸಸಿಗಳ ಪೋಷಣೆ ಕಷ್ಟ. ವಾರ್ಡುಗಳಲ್ಲಿ 100 ರಿಂದ 150 ಸಸಿಗಳನ್ನು ನೆಡಲು ಜಾಗವಿಲ್ಲ. ಇನ್ನೂ ಎಲ್ಲಾ ವಾರ್ಡುಗಳು ಸೇರಿ 1 ಲಕ್ಷ ಸಸಿ ನೆಡಲು ಜಾಗವೆಲ್ಲಿಂದ ತರುತ್ತಾರೆ? ಎಂದು ಪ್ರಶ್ನಿಸಿದ ನಾಗರಾಜ್, ಈ ರೀತಿಯ ತಪ್ಪು ಮಾಹಿತಿಗಳನ್ನು ನೀಡಬಾರದು ಎಂದರು.

ಪಾಲಿಕೆ ಕಾಂಗ್ರೆಸ್ ಸದ್ಯರಾದ ದೇವರಮನೆ ಶಿವಕುಮಾರ್, ಮಂಜುನಾಥ ಗಡಿಗುಡಾಳ್, ಚಮನ್ ಸಾಬ್, ಅಬ್ದುಲ್ ಲತೀಫ್, ಸೈಯದ್ ಚಾರ್ಲಿ, ಜಾಕಿರ್ ಅಲಿ, ನಾಗರಾಜ್ ಪಾಮೇನಹಳ್ಳಿ, ಮುಖಂಡರಾದ ಹುಲ್ಮನಿ ಗಣೇಶ್, ಇಟ್ಟಿಗುಡಿ ಮಂಜುನಾಥ್, ಉಮೇಶ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

## ಹರಿಹರದಲ್ಲಿ ಇಂದು ಸಹಕಾರ ಸಪ್ತಾಹ

'ಸಹಕಾರಿ ಮಾರಾಟ, ಗ್ರಾಹಕ, ರೂಪಾಂತರ ಮತ್ತು ಮೌಲ್ಯವರ್ಧನೆ' ಧ್ಯೇಯದಡಿಯಲ್ಲಿ 67ನೇ ಅಖಿಲ ಭಾರತ ಸಹಕಾರ ಸಪ್ತಾಹ ಕಾರ್ಯಕ್ರಮವು ಇಲ್ಲಿನ ಟಿಎಪಿಸಿಎಂಎಸ್ ಕಚೇರಿಯಲ್ಲಿ ಇಂದು ನಡೆಯಲಿದೆ.

## ಮಕ್ಕಳಿಗೆ ಕೊರೊನಾ ಕಾಡದು

(5ನೇ ಪುಟದಿಂದ) ಭಾಗಿಯಾಗಿದ್ದ ಜೆನ್ನಿಫರ್ ಸುಕ್ರೆ ಹೇಳಿದ್ದಾರೆ. ಕೊರೊನಾ ವೈರಸ್‌ಗಳು ಶ್ವಾಸಕೋಶದಲ್ಲಿರುವ ಎಸಿಇ2 ಕಣಗಳಿಗೆ ಅಂಟಿಕೊಳ್ಳುತ್ತವೆ. ಇದೇ ಸೋಂಕಿಗೆ ದಾರಿ ಮಾಡಿಕೊಡುತ್ತದೆ. ಇನ್ನೊಂದು ಪ್ರೊಟೀನ್ ಟಿಎಂಪಿಆರ್‌ಎಸ್‌ಎಸ್2 ಕಾರಣದಿಂದ ವೈರಸ್ ದೇಹದ ಒಳಗೆ ಸೇರಿಕೊಳ್ಳುತ್ತದೆ ಎಂದು ಅಧ್ಯಯನ ತಿಳಿಸಿದೆ.

## ಜಿಲ್ಲೆಯಲ್ಲಿ 29 ಜನರಿಗೆ ಕೊರೊನಾ

ದಾವಣಗೆರೆ, ನ.14- ಜಿಲ್ಲೆಯಲ್ಲಿ 29 ಜನರಿಗೆ ಕೊರೊನಾ ದೃಢಪಟ್ಟಿದ್ದು, 26 ಜನರು ಸೋಂಕು ಮುಕ್ತರಾಗಿ ಬಿಡುಗಡೆಯಾಗಿದ್ದಾರೆ. ದಾವಣಗೆರೆ ತಾಲ್ಲೂಕಿನಲ್ಲಿ 13, ಹರಿಹರ 8, ಚನ್ನಗಿರಿ 4, ಹೊನ್ನಾಳಿ 3 ಹಾಗೂ ಹೊರ ಜಿಲ್ಲೆಯ ಒಬ್ಬರಲ್ಲಿ ಸೋಂಕು ಕಾಣಿಸಿಕೊಂಡಿದೆ. 325 ಸಕ್ರಿಯ ಪ್ರಕರಣಗಳಿವೆ.


ನಮ್ಮೆಲ್ಲಾ ಆತ್ಮೀಯ ಗ್ರಾಹಕರಿಗೂ, ಹಿತೈಷಿಗಳಿಗೂ, ಬಂಧುಗಳಿಗೂ, ಸರ್ವ ನಾಗರಿಕರಿಗೂ ಬೆಳಕಿನ ಹಬ್ಬ ದೀಪಾವಳಿ ಶುಭಾಶಯಗಳು.

**ಕನ್ಸಲ್ಟೆನ್ಸಿ ಸರ್ವೀಸಸ್**

ನಮ್ಮ ಕಛೇರಿಯಲ್ಲಿ ಬಿಲ್ಡಿಂಗ್ ಪ್ಲ್ಯಾನ್ಸ್, ಎಸ್ಟಿಮೇಷನ್, ಲೇಔಟ್ ಪ್ಲ್ಯಾನ್ಸ್, ಆನ್‌ಲೈನ್ ಅಪ್‌ಲೋಡ್, ಬ್ಲೂ ಪ್ರಿಂಟ್ಸ್ ಮತ್ತು ಪ್ಲಾಟರ್ ಪ್ರಿಂಟ್ಸ್ (A4-A0 ಸೈಜ್) ಮಾಡಿಕೊಡಲಾಗುತ್ತದೆ. ಸಂಪರ್ಕಿಸಿ:

**ಶ್ರೀ ವೀರಭದ್ರೇಶ್ವರ ಕನ್ಸಲ್ಟೆನ್ಸಿ ಸರ್ವೀಸಸ್**

ಪಿ.ಜೆ. ಲಾಡ್ಜ್ ಎದುರು, ಎ.ವಿ.ಕೆ. ಕಾಲೇಜ್ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.


ಮೊ. 99168 73399, 93432 77422, 99161 73399



**ಭೂಮಿಕ ಮ್ಯಾಟ್ರಿಮೊನಿ**

**Bhoomika Matrimony**

**Lingayath community**



**ಲಿಂಗಾಯತ ವಧು-ವರಗಳಿಗಾಗಿ ಸಂಪರ್ಕಿಸಿ**

ಹೆಡ್ ಆಫೀಸ್: ವಿದ್ಯಾನಗರ. ನೂತನ ಕಾಲೇಜ್ ರೋಡ್, ಕಾಫಿ ಡೇ ಹತ್ತಿರ, ದಾವಣಗೆರೆ.

ಬ್ರಾಂಚ್ ಆಫೀಸ್: ಬಿ.ಐ.ಇ.ಟಿ. ರೋಡ್, ಹೇಮಾವತಿ ಹಾಸ್ಟೆಲ್ ಹತ್ತಿರ, ದಾವಣಗೆರೆ.

Website : www.bhoomikamatrimony.com

**77603 16576, 90080 55813**

**ಹಾರ್ದಿಕ ಅಭಿನಂದನೆಗಳು**



ಹರಿಹರ ತಾಲ್ಲೂಕು ವ್ಯವಸಾಯೋತ್ಪನ್ನಗಳ ಮಾರಾಟ ಸಹಕಾರ ಸಂಘದ ಆಡಳಿತ ಮಂಡಳಿಗೆ ನಿರ್ದೇಶಕರಾಗಿ ಅವಿರೋಧವಾಗಿ ಆಯ್ಕೆಯಾಗಿರುವ ನಮ್ಮ ಸಹಕಾರ ಸಂಘದ ನಿರ್ದೇಶಕರೂ ಆದ

**ಶ್ರೀ ಹೆಚ್. ಆಂಜನೇಯ**

ಅವರಿಗೆ ನಮ್ಮ ಹಾರ್ದಿಕ ಅಭಿನಂದನೆಗಳು. ಆಂಜನೇಯ ಅವರ ಆಯ್ಕೆಗೆ ಸಹಕರಿಸಿದ ಎಲ್ಲರಿಗೂ ನಮ್ಮ ಕೃತಜ್ಞತೆಗಳು.

ಸರ್ವರಿಗೂ ದೀಪಾವಳಿ ಹಬ್ಬದ ಶುಭಾಶಯಗಳು...

ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಕಾರ್ಯಕಾರಿ ಮಂಡಳಿ ಗ್ರಾಮಸ್ಥರು ಮತ್ತು ಸಂಘದ ಸಿಇಓ, ಸಿಬ್ಬಂದಿ ವರ್ಗ

**ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಕುಂಬಳೂರು.**

**ದೀಪಾವಳಿ ಹಾರ್ದಿಕ ಶುಭಾಶಯಗಳು**

ಸಮಸ್ತ ಅಕ್ಕಿ ವರ್ತಕ ಬಾಂಧವರಿಗೆ ಮತ್ತು ನಮ್ಮೆಲ್ಲಾ ಗ್ರಾಹಕರಿಗೆ ಹಾಗೂ ಬಂಧು-ಮಿತ್ರರಿಗೆ ಬೆಳಕಿನ ಹಬ್ಬ ದೀಪಾವಳಿಯ ಹಾರ್ದಿಕ ಶುಭಾಶಯಗಳು.

41ನೇ ವರ್ಷಕ್ಕೆ ಪಾದಾರ್ಪಣೆ

**ಬಾಳೆಹೊಲದ ಟ್ರೇಡರ್ಸ್**

ರೈಸ್ ಮರ್ಚೆಂಟ್ಸ್, ಚೌಕಿಪೇಟೆ, ದಾವಣಗೆರೆ.



ಬಾಳೆಹೊಲದ ರೇವಣಸಿದ್ದಪ್ಪ (ಬಿ. ಆರ್. ಸಿದ್ದಣ್ಣ)

ಅಧ್ಯಕ್ಷರು, ಅಕ್ಕಿ ವರ್ತಕರ ಸಂಘ, ದಾವಣಗೆರೆ.

ಮೊ. : 94489 80343



**ವಿಶ್ವಕರ್ಮ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ.,**

ಮುಖ್ಯ ಕಛೇರಿ : ನಂ.75/1, ತುಳಸಿ ಕಾಂಪ್ಲೆಕ್ಸ್, 1ನೇ ಮಹಡಿ, ವಸಂತ ರಸ್ತೆ, ದಾವಣಗೆರೆ-01. ಫೋ : 08192-271472

ಶಾಖಾ ಕಛೇರಿ : ಹೆಚ್.ಕೆ.ಆರ್. ಸರ್ಕಲ್, ನಿಟುವಳ್ಳಿ ದಾವಣಗೆರೆ. ಫೋ : 08192-264536

**ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯಗಳು**

ನಮ್ಮ ಸೊಸೈಟಿಯ ಎಲ್ಲಾ ಸದಸ್ಯ ಸಹಕಾರಿ ಬಾಂಧವರಿಗೆ, ಗ್ರಾಹಕರಿಗೆ ಹಾಗೂ ಸಮಸ್ತ ಕನ್ನಡ ಜನತೆಗೆ ಬೆಳಕಿನ ಹಬ್ಬ ದೀಪಾವಳಿ ಮತ್ತು ಕರ್ನಾಟಕ ರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು.

ಬಿ.ವಿ. ಶಿವಾನಂದ, ಅಧ್ಯಕ್ಷರು | ಆರ್. ವಿಜಯಕುಮಾರ್, ಉಪಾಧ್ಯಕ್ಷರು

ನಿರ್ದೇಶಕರುಗಳು :

✦ ಬಿ.ನಾಗೇಂದ್ರಾಚಾರ್ (ಬಸಾಪುರ)
✦ ಹೆಚ್.ಎನ್.ಜಯಾಚಾರ್ (ಹಿರೇಮೇಗಳಗೆರೆ)
✦ ಎಂ.ಪಿ.ನಾಗರಾಜ್ (ಶಾಮನೂರು)
✦ ಎನ್.ಪೂರ್ವಾಚಾರ್
✦ ಆರ್.ರೇಖಾ ರಮೇಶ್
✦ ಭಾಗ್ಯಮ್ಮ ಮಂಜುನಾಥ
✦ ಎ.ಬಿ. ರವಿ
✦ ಬಿ. ಸಿದ್ದಾಚಾರ್
✦ ಎಸ್.ನಾಗರಾಜಾಚಾರ್ (ಮಾಯಕೊಂಡ)
✦ ವಿ.ಎಂ.ಕೊಟ್ರೇಶಾಚಾರ್
✦ ನೀಲಾವತಿ ಮಂಜುನಾಥಾಚಾರ್

✦ ಸಿ.ಆರ್.ಬಡಿಗೇರ್, ಕಾರ್ಯದರ್ಶಿ ✦ ಬಿ.ಎನ್. ಭೀಷ್ಮಾಚಾರ್, ಶಾಖಾ ವ್ಯವಸ್ಥಾಪಕರು

# ಆಲೂರು ಚಂದ್ರಶೇಖರಪ್ಪ ಮೆಮೋರಿಯಲ್ ಟ್ರಸ್ಟ್ ನಿಂದ ವಿಶ್ವ ಮಧುಮೇಹ ಮೇಳ




ದಾವಣಗೆರೆ, ನ.14- ನಗರದ ಆಲೂರು ಚಂದ್ರಶೇಖರಪ್ಪ ಮೆಮೋರಿಯಲ್ ಟ್ರಸ್ಟ್ ಮತ್ತು ಆಸ್ಪತ್ರೆ, ಸಕ್ಕರೆ ಕಾಯಿಲೆ ತಪಾಸಣೆ ಹಾಗೂ ಸಂಶೋಧನಾ ಕೇಂದ್ರದ ವತಿಯಿಂದ ದಿ. ಆಲೂರು ಚಂದ್ರಶೇಖರಪ್ಪನವರ ಜ್ಞಾಪಕಾರ್ಥ ಹಾಗೂ ವಿಶ್ವ ಮಧುಮೇಹ ದಿನಾಚರಣೆ ಅಂಗವಾಗಿ 36ನೇ ವಿಶ್ವ ಮಧುಮೇಹ ಮೇಳ ಕಾರ್ಯಕ್ರಮ ಶನಿವಾರ ನಡೆಯಿತು.

ಈ ವರ್ಷದ ಘೋಷಣೆ 'ಸಕ್ಕರೆ ಕಾಯಿಲೆ ಮತ್ತು ಶುಶ್ರೂಷಕರು' ವಿಷಯಕ್ಕೆ ಕಾರ್ಯಕ್ರಮದಲ್ಲಿ ಹೆಚ್ಚಿನ ಮಹತ್ವ ಕೊಡಲಾಗಿತ್ತು. ಶ್ರೀಮತಿ ಸುನಂದಮ್ಮ ಚಂದ್ರಶೇಖರಪ್ಪ ಆಲೂರು ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು.

ಶ್ರೀಮತಿ ವರ್ಷಿತ ವರುಣ ಚಂದ್ರ ಆಲೂರು, ಶ್ರೀಮತಿ ಪ್ರಿಯಾಂಕ ಹೇಮಂತ ಬಸಪ್ಪ ಆಲೂರು, ಶ್ರೀಮತಿ ಗಂಗಾಂಬಿಕಾ ಪ್ರಭಾಕರ್, ಶ್ರೀಮತಿ ಕವಿತ ವಿಶ್ವನಾಥ್, ಶ್ರೀಮತಿ ಸುಜಾತ ರವೀಂದ್ರ, ಶ್ರೀಮತಿ ಅನಿತ ಬಸವರಾಜ್ ಹಾಗೂ ಇತರರು ಸಮಾರಂಭದ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕೋವಿಡ್ ಹಿನ್ನೆಲೆಯಲ್ಲಿ ವರ್ಚುಯಲ್ ಲೈವ್ ಮೀಟಿಂಗ್ ಮೂಲಕ ಕಾರ್ಯಕ್ರಮ ಬಿತ್ತರವಾಯಿತು.

ಸಕ್ಕರೆ ಕಾಯಿಲೆ ತಜ್ಞವೈದ್ಯ ಡಾ.ಮಂಜುನಾಥ ಆಲೂರು ಪ್ರಾಸ್ತಾವಿಕ ಭಾಷಣ ಮಾಡಿದರು. ಕಿರಣ್ ಚಂದ್ರ ಆಲೂರು ಕಾರ್ಯಕ್ರಮ ನಿರೂಪಿಸಿದರು. ಡಾ.ವರುಣ ಚಂದ್ರ ಆಲೂರು ಸಕ್ಕರೆ ಕಾಯಿಲೆ ಮತ್ತು ಶುಶ್ರೂಷಕರು ವಿಷಯದ ಮಹತ್ವ ತಿಳಿಸಿದರು. ಶ್ರೀಮತಿ ಶೈಲಜಾ ಮಂಜುನಾಥ ಆಲೂರು ವಂದಿಸಿದರು.



ದೀಪಾವಳಿ ಹಬ್ಬದ ಪ್ರಯುಕ್ತ ದಾವಣಗೆರೆ ಗಡಿಯಾರ ಕಂಬದ ಗಣೇಶ ದೇವಸ್ಥಾನದಲ್ಲಿ ಶ್ರೀ ಗಣಪತಿಗೆ ವಿಶೇಷ ನೋಟಿನ ಅಲಂಕಾರ.

## ಮಮತಾ, ರೆಡ್ಡಿ ಮಹಿಳಾ ಒಕ್ಕೂಟಕ್ಕೆ ಆಯ್ಕೆ



ದಾವಣಗೆರೆ, ನ. 14 - ಅಖಿಲ ಭಾರತ ರೆಡ್ಡಿ ಒಕ್ಕೂಟದ ರಾಜ್ಯಮಟ್ಟದ ಮಹಿಳಾ ಘಟಕದ ಕಾರ್ಯಕಾರಿಣಿ ಸದಸ್ಯರಾಗಿ ನಗರದ ಶ್ರೀಮತಿ ಮಮತಾ ಎಂ.ಬಾವಿಕಟ್ಟಿ ನೇಮಕಗೊಂಡಿದ್ದಾರೆ.

ಹರಿಹರ ತಾಲ್ಲೂಕು ಎರೆಹೊಸಹಳ್ಳಿಯಲ್ಲಿರುವ ಹೇಮ ವೇಮ ರೆಡ್ಡಿ ಗುರುಪೀಠದಲ್ಲಿ ಮೊನ್ನೆ ನಡೆದ ಸರಳ ಕಾರ್ಯಕ್ರಮದಲ್ಲಿ ಗುರುಪೀಠದ ಶ್ರೀ ವೇಮಾನಂದ ಗುರುಗಳ ಸಾನ್ನಿಧ್ಯದಲ್ಲಿ ಒಕ್ಕೂಟದ ಅಧ್ಯಕ್ಷ ಮೇಜರ್ ಎನ್. ರಘುರಾಮರೆಡ್ಡಿ ಅವರು ಮಮತಾ ಅವರಿಗೆ ನೇಮಕಾತಿ ಪತ್ರ ನೀಡಿದರು.

ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ.ಗುರುನಾಥ ರೆಡ್ಡಿ, ಬಿ.ಎಂ.ಪಾಟೀಲ್, ರಮೇಶ್ ಬಗಲಿ, ಹರ್ಷಾ ಪಾಟೀಲ್, ಸುನೀಲ್‌ರೆಡ್ಡಿ ಬಾಂಡರಾವಿ, ಮಲ್ಲಿಕಾರ್ಜುನ್ ಬಾವಿಕಟ್ಟಿ, ಮನೋಜ್, ಶಂಕರ್ ಎಡ್ಡಿ ಬಾಗಲಕೋಟೆ, ಹೆಚ್.ಪಿ. ದೇವರಾಜ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಕೊರೊನಾ : ಸಕ್ರಿಯ ಸೋಂಕು 5 ಲಕ್ಷಕ್ಕೂ ಕಡಿಮೆ

ನವದೆಹಲಿ ನ. 14 – ಭಾರತದಲ್ಲಿ ಸಕ್ರಿಯ ಸೋಂಕಿತರ ಸಂಖ್ಯೆ ಐದು ಲಕ್ಷಕ್ಕೂ ಕಡಿಮೆ ಹಂತಕ್ಕೆ ತಲುಪಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ. ದೇಶದಲ್ಲಿ ಪ್ರಸಕ್ತ 4.80 ಲಕ್ಷ ಸಕ್ರಿಯ ಸೋಂಕಿತರಿದ್ದಾರೆ. ಒಟ್ಟು ಸೋಂಕಿತರಲ್ಲಿ ಸಕ್ರಿಯರ ಪಾಲು ಶೇ.5.48 ಎಂದು ಸಚಿವಾಲಯದ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಹೊಸ ಸೋಂಕುಗಳ ಸಂಖ್ಯೆ ಪ್ರತಿದಿನ ಇಳಿಮುಖವಾಗುತ್ತಿದೆ. ಇದುವರೆಗೂ ಒಟ್ಟು ಸೋಂಕಿತರ ಶೇ.93.05ರಷ್ಟು ಜನರು ಗುಣಮುಖರಾಗಿದ್ದಾರೆ.

## ಮೆಳ್ಳೇಕಟ್ಟೆ : 20ರಂದು ಶ್ರೀ ಮರುಳಸಿದ್ದೇಶ್ವರ ನೂತನ ದೇವಸ್ಥಾನ ಉದ್ಘಾಟನೆ

ದಾವಣಗೆರೆ ತಾಲ್ಲೂಕಿನ ಮೆಳ್ಳೇಕಟ್ಟೆಯಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀ ಮರುಳಸಿದ್ದೇಶ್ವರ, ಶ್ರೀ ಮಹಾಮಾಯಿ ದ್ಯಾಮಲಾಂಬ ಹಾಗೂ ಶ್ರೀ ಮಾರ್ಗದ ಬಸವೇಶ್ವರ ದೇವಸ್ಥಾನದ ಉದ್ಘಾಟನೆ, ಮೂರ್ತಿ ಪ್ರತಿಷ್ಠಾಪನೆ ಮತ್ತು ಕಳಸಾರೋಹಣ ಸಮಾರಂಭವನ್ನು ಇದೇ ದಿನಾಂಕ 20 ರ ಶುಕ್ರವಾರ ಹಮ್ಮಿಕೊಳ್ಳಲಾಗಿದೆ. ಈ ಪ್ರಯುಕ್ತ ಇಂದಿನಿಂದ ಪ್ರತಿದಿನ ಬೆಳಿಗ್ಗೆ 6 ರಿಂದ ಆದಿವಾಸಾದಿ ಪೂಜೆ, ಇತ್ಯಾದಿ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ.













JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte